www.prepp.in

Prepp
Your Personal Exams Guide

2021

KMSS

2021

22/08/22

Question Booklet Sl. No. 9246691

# QUESTION BOOKLET – PAPER – II

## (KANNADA MEDIUM SOCIAL SCIENCE ONLY)

SUBJECTS : Language – I, Language – II, Child Development and Pedagogy, Social Science

Maximum Marks : 150 – 119 | 02.00 P.M. to 04.30 P.M. | Max. Time : 2.30 Hours

110/149

## INSTRUCTIONS TO THE CANDIDATES (Read Carefully)

Note: Candidates are instructed to confirm

- Whether pre-printed O.M.R. has your name and register number printed on it.
- Whether pre-printed O.M.R. Sheet No. and QP Booklet No. are same.
- If the candidate uses the O.M.R./QP booklet which doesn't belong to him/her, such O.M.R. sheets are not considered for evaluation.

1. The sealed Question Booklet contains 150 questions and O.M.R. Answer Sheets. Verify whether the given Question Booklet is of the same PAPER and MEDIUM as the candidate opted in the application.
2. The Questions are printed in Kannada and English Medium. But in any case of any discrepancies/doubt the question in English Medium is considered as valid.
3. The Question Paper contains four parts I, II, III and IV consisting of 150 Objective Type Questions, EACH QUESTION CARRYING ONE MARK.

| Parts | Subjects | Q. No. | Page No. |
|---|---|---|---|
| Part – I | Lang. – I (Kannada, English, Urdu, Tamil, Telugu, Marathi, Hindi, Sanskrit) | 1 to 30 | 2 to 44 |
| Part – II | Lang. – II (Kannada, English, Urdu, Tamil, Telugu, Marathi, Hindi, Sanskrit) | 31 to 60 | 45 to 88 |
| Part – III | CDP (Kannada) | 61 to 90 | 89 to 94 |
| Part – III | CDP (English) | 61 to 90 | 95 to 100 |
| Part – IV | Social Science (Kannada) | 91 to 150 | 101 to 110 |
| Part – IV | Social Science (English) | 91 to 150 | 111 to120 |

4. Part – I contains 30 Questions for the Language – I and Part – II contains 30 Questions for the Language – II. In this Question Booklet Questions pertaining to all Languages have been given. The Languages being answered must tally with the Languages opted by the candidate in online application.
5. Candidates are required to attempt Questions in Part – II (Language – II) in any Language other than the Language chosen in the Part – I (Language – I).
6. Questions related to Part : III – Child Development and Pedagogy (Q. No. 61 to 90), Part : IV Social Science (Q. No. 91 to 150) are given both in Kannada and English medium in the Question Paper Booklet. The Questions answered must tally with the medium opted in the online application.
7. All the entries in the circle must be made with BLUE OR BLACK BALL POINT PEN ONLY. Any alteration in the answer counts as invalid.
8. Each candidate is given carbonless O.M.R. sheet along with the original O.M.R. answer sheet. Candidate should return the ORIGINAL O.M.R. ANSWER SHEET TO THE ROOM SUPERVISOR and retain the carbonless copy of the same with the candidate.
9. Calculator, mobile phone and any other electronic devices are not allowed.
10. If a candidate is found committing malpractice, necessary action will be taken against such candidate as per the examination rules.

SEAL

www.prepp.in

Prepp
Your Personal Exams Guide

# PART – I

## ಭಾಷೆ – I

## ಕನ್ನಡ

**ಸೂಚನೆ : ಈ ಕೆಳಗಿನ ಗದ್ಯಭಾಗವನ್ನು ಓದಿ 1 ರಿಂದ 8 ಪ್ರಶ್ನೆಗಳಿಗೆ ಉತ್ತರಿಸಿರಿ :**

ಮಂಜಣ್ಣ ನಮ್ಮ ಮನೆಯ ಆಳು; ಬಹಳ ಹಳೆಯ ಮನುಷ್ಯ. ಅಂದರೆ ಸುಮಾರು ಅರವತ್ತು ವರ್ಷ. ಅವನ ಮುಖದ ತುಂಬ ಬಿಳಿಯ ಗಡ್ಡ ಮೀಸೆ. ತಲೆಯ ತುಂಬ ಹಣ್ಣು ಹಣ್ಣು ಕೂದಲು. ಅವನ ಗಡ್ಡವೇನು ಮಲೆನಾಡಿನ ಗಿರಿಗಳ ಮೇಲೆ ನಿಬಿಡವಾಗಿ ಬೆಳೆವ ತರುನಿಕರದಂತೆ ಉದ್ದವಾಗಿ ನೀಳವಾಗಿರಲಿಲ್ಲ. ಬಯಲು ಸೀಮೆಯ ಗುಡ್ಡಗಳಲ್ಲಿ ಬೆಳೆಯುವ ವಿರಳವಾದ ಪೊದೆಗಳಂತೆ ಇತ್ತು. ಸುಲಭವಾಗಿ ಹೇಳುವುದಾದರೆ ಇಲಿ ತರಿದಂತೆ ಇತ್ತು. ಅದಕ್ಕೊಂದು ಕಾರಣ ಇದೆ. ನಮ್ಮ ಮಂಜಣ್ಣ ಕ್ಷೌರಿಕರೊಡನೆ ಅಸಹಕಾರ ಮಾಡಿದ್ದ. ಅವನಿಗೆ ಕುಡುಗೋಲೇ ಮುಂಡನದ ಕೈದು (ಆಯುಧ). ಗಡ್ಡ ಉದ್ದವಾದ ಕೂಡಲೆ ಅದರ ತುದಿಯನ್ನು ಒಟ್ಟುಗೂಡಿಸಿ, ಮಸೆತು ಹರಿತವಾದ ಕುಡುಗೋಲಿನಿಂದ ಚರಚರನೆ ಕೊಯ್ಯುತ್ತಿದ್ದ. ಬೆಳೆದು ಹಣ್ಣಾಗಿ ನಿಂತ ಭತ್ತದ ಪೈರನ್ನು ಸವರಿ ರಾಶಿ ಮಾಡುವಂತೆ.

ಮಂಜಣ್ಣನೆಂದರೆ ನಮಗೆಲ್ಲ ಪ್ರಾಣ; ಏಕೆಂದರೆ ನಮಗೆಲ್ಲ ಅವನೇ ಕತೆಗಾರ. ಆ ವೃದ್ಧಮೂರ್ತಿಯನ್ನು ನೋಡಿದ ಕೂಡಲೆ ಹುಡುಗರಾದ ನಮಗೆ ಅವನು ಆಳು ಎಂಬುದು ಮರೆತುಹೋಗಿ, ಅವನಲ್ಲಿ ಗುರುಭಾವ ಉಂಟಾಗುತ್ತಿತ್ತು ! ಲವಕುಶರಿಗೆ ವಾಲ್ಮೀಕಿಯನ್ನು ಕಂಡರೆ ಯಾವ ಭಾವ ಉಂಟಾಗುತ್ತಿತ್ತೋ ಆ ಭಾವ, ಆದರೇನು ? ನಮಗೆ ಗುರು, ನಮ್ಮ ಹಿರಿಯರಿಗೆ ಆಳು ! ಅವನೂ ದಿನವೂ ಎಲ್ಲರಂತೆ ಕೆಲಸಕ್ಕೆ ಹೋಗಬೇಕಾಗಿತ್ತು. ನಾನು ಒಂದೊಂದು ಸಾರಿ ಹೀಗೆಂದು ಯೋಚಿಸುತ್ತಿದ್ದೆ. ನಾನು ಯಜಮಾನನಾದರೆ ಮಂಜಣ್ಣನಿಗೆ ಕತೆ ಹೇಳುವ ಕೆಲಸವೊಂದನ್ನೇ ಕೊಡುವೆನೆಂದು ! ಮುಗ್ಧಾಲೋಚನೆ ! ನಾನು ಏಳೆಂಟು ವರ್ಷದ ಹುಡುಗ. ಮಂಜಣ್ಣ ಅರುವತ್ತು ವರ್ಷದ ಮುದುಕ ! ನಾನು ಯಜಮಾನನಾಗುವ ತನಕ ಅವನು ಬದುಕಿರುವನೆ ? ಹೌದು ಆಗ ಇರುವನೆಂದೇ ಭಾವಿಸಿದ್ದೆ.

ಪ್ರತಿದಿನ ಹೊತ್ತು ಎಷ್ಟು ಬೇಗ ಮುಳುಗುವುದೋ ಎಂದು ನಾವೆಲ್ಲ ಹಾರೈಕೆಯಿಂದ ಎದುರು ನೋಡುತ್ತಾ ಇರುತ್ತಿದ್ದೆವು. ಏಕೆಂದರೆ ಕತ್ತಲಾಗಲು ಮಂಜಣ್ಣ ನಮಗೆ ಕತೆ ಹೇಳುತ್ತಿದ್ದ. ಮಂಜಣ್ಣನೆಂದರೆ ನಿಜವಾಗಿಯೂ 'ಕಥಾ ಸರಿತ್ಸಾಗರ'. ಅವೆಲ್ಲಾ ಅವನ ಕತೆಗಳೋ ? ಅಥವಾ ಅನ್ಯರಿಂದ ಕಲಿತವುಗಳೋ ಏನೋ ? ನಮಗೆ ತಿಳಿಯದು. ಕತೆಗಂತೂ ಅವನು ಕಲ್ಪವೃಕ್ಷವೇ ಸರಿ. "ಮಂಜಣ್ಣ ಕತೆ ಹೇಳೋ" ಎಂದು ಹೇಳುವುದೇ ತಡ ಕತೆಯ ಪ್ರವಾಹ ಹಲ್ಲಿಲ್ಲದ ಅವನ ಮುದಿ ಬಾಯಿಯಿಂದ ಹೊರಸೂಸುತ್ತಿತ್ತು. ನಾವೆಲ್ಲಾ ಒಂದೇ ಮನಸ್ಸಿನಿಂದ ಕತೆ ಕೇಳುತ್ತಾ ಕುಳಿತು ಬಿಡುತ್ತಿದ್ದೆವು.

1. ಮಕ್ಕಳಿಗೆ ಮಂಜಣ್ಣನಲ್ಲಿ ಗುರುಭಾವ ಉಂಟಾಗಲು ಕಾರಣ, ಅವನು
   (1) ವೃದ್ಧನಾಗಿದ್ದುದರಿಂದ
   (2) ಮನೆಯ ಆಳಾಗಿದ್ದುದರಿಂದ
   (3) ಕತೆಗಳನ್ನು ಹೇಳುತ್ತಿದ್ದುದರಿಂದ
   (4) ಬಿಳಿಯ ಗಡ್ಡಮೀಸೆ ಇದ್ದುದರಿಂದ

2. ಮಂಜಣ್ಣನ ಕತೆ ಕೇಳಲು ಮಕ್ಕಳ ಹಾರೈಕೆ ಇದು
   (1) ಊಟ ಬೇಗ ಮುಗಿಯಲಿ
   (2) ಬೇಗ ಹೊತ್ತು ಮುಳುಗಲಿ
   (3) ಬೇಗ ಮನೆಯವರು ಮಲಗಲಿ
   (4) ಕತೆ ಬೇಗ ಮುಗಿಯಲಿ

www.prepp.in

3. ಮಂಜಣ್ಣ ತನ್ನ ಗಡ್ಡವನ್ನು ತೆಗೆಯಲು ಬಳಸುತ್ತಿದ್ದ ಆಯುಧ
(1) ಕುಡುಗೋಲು (2) ಚಾಕು (3) ಕತ್ತರಿ (4) ಬ್ಲೇಡ್

4. ಲೇಖಕರ ಪ್ರಕಾರ ಮಂಜಣ್ಣನೆಂದರೆ ಹೀಗೆ
(1) ಮನೆಯ ಆಳು (2) ವೃದ್ಧಮೂರ್ತಿ
(3) ಹಾಡುಗಾರ (4) ಕಥಾ ಸರಿತ್ಸಾಗರ

5. ಲೇಖಕರು ಮಂಜಣ್ಣನ ಗಡ್ಡವನ್ನು ಇದಕ್ಕೆ ಹೋಲಿಸಿದ್ದಾರೆ
(1) ಬಯಲು ಸೀಮೆಯ ವಿರಳವಾದ ಪೊದೆಗೆ
(2) ಮಲೆನಾಡಿನ ಗಿಡಮರಗಳಿಗೆ
(3) ಹೊಲದಲ್ಲಿ ಬೆಳೆಯುವ ಹುಲ್ಲಿಗೆ
(4) ಭತ್ತದ ಪೈರಿಗೆ

6. 'ಚರಚರನೆ' ಪದವು ಈ ವ್ಯಾಕರಣಾಂಶಕ್ಕೆ ಸೇರಿದೆ
(1) ದ್ವಿರುಕ್ತಿ (2) ನುಡಿಗಟ್ಟು
(3) ಅನುಕರಣಾವ್ಯಯ (4) ಜೋಡಿಪದ

7. 'ಮೇಲೊಂದು' ಪದವು ಈ ಸಂಧಿಗೆ ಉದಾಹರಣೆಯಾಗಿದೆ
(1) ಆಗಮಸಂಧಿ (2) ಲೋಪಸಂಧಿ (3) ಆದೇಶಸಂಧಿ (4) ಗುಣಸಂಧಿ

8. ಮಂಜಣ್ಣನ ಬಗೆಗೆ ಲೇಖಕರ ಮುಗ್ಧಾಲೋಚನೆ ಇದು
(1) ಮಂಜಣ್ಣನನ್ನು ಮನೆಯ ಆಳಾಗಿಯೇ ಉಳಿಸಿಕೊಳ್ಳುವುದು
(2) ಮಂಜಣ್ಣನನ್ನು ಮನೆಯ ಯಜಮಾನನನ್ನಾಗಿ ಮಾಡುವುದು
(3) ಮಂಜಣ್ಣನನ್ನು ತನ್ನ ಗುರುವನ್ನಾಗಿಸಿಕೊಳ್ಳುವುದು
(4) ಮಂಜಣ್ಣನಿಗೆ ಕತೆ ಹೇಳುವ ಕೆಲಸವೊಂದನ್ನೇ ಕೊಡುವುದು

**ಸೂಚನೆ :** ಈ ಕೆಳಗಿನ ಪದ್ಯಭಾಗವನ್ನು ಓದಿಕೊಂಡು 9ರಿಂದ 15ರವರೆಗಿನ ಪ್ರಶ್ನೆಗಳಿಗೆ ಉತ್ತರಿಸಿರಿ :

ನೋಡು ಇದೊ ಇಲ್ಲರಳಿ ನಗುತಿದೆ
ಏಳು ಸುತ್ತಿನ ಮಲ್ಲಿಗೆ
ಇಷ್ಟು ಹಚ್ಚನೆ ಹಸುರು ಗಿಡದಿಂ-
ದೆಂತು ಮೂಡಿತೊ ಬೆಳ್ಳಗೆ!

ಮೇಲೆ ನಭದಲಿ ನೂರು ತಾರೆಗಳ-
ಳರಳಿ ಮಿರುಗುವ ಮುನ್ನವೆ
ಬೆಳ್ಳಿಯೊಂದೇ ಬೆಳಗುವಂದದಿ
ಗಿಡದೊಳೊಂದೇ ಹೂವಿದೆ

www.prepp.in

ಸತ್ವ ಶೀಲನ ಧ್ಯಾನಮೌನವೆ
ಅರಳಿ ಬಂದೊಲು ತೋರಿದೆ!
ಒಲವು ತುಂಬಿದ ಮುಗುದೆಯೆದೆಯಿಂ-
ದೊಗೆದ ನಲ್ನುಡಿಯಂತಿದೆ

ಕವಿಯ ಮನದಿಂದುದಿಸಿ ಮೆಲ್ಲನೆ
ಅರಳಿ ಬರುವೊಲು ಕಲ್ಪನೆ,
ಎಂಥ ನವುರಿನ ಕುಶಲ ಕಲೆಯಿದು
ತನಗೆ ತಾನೇ ಮೂಡಿದೆ

ಮೌನದಲಿ ಮೊಳೆಯುತ್ತ ಮೆಲ್ಲನೆ
ತನಗೆ ತಾನೇ ತಿಳಿಯದೆ
ಮೊಗ್ಗಿನಲಿ ಮಲಗಿದ್ದ ಚೆಲುವಿದು
ಇಂದು ಕಣ್ಣನು ತೆರೆದಿದೆ.

ಎನಿತು ನವುರಾಗಿಹವು ದಳಗಳು
ಹಸುಳೆ ಕಾಣುವ ಕನಸೊಲು!
ಏನು ಇಂಪಿನ ಕಂಪು ಇದರದು
ಆ ಮಹಾತ್ಮರ ಮನದೊಲು

ಹರಿವ ಮನವನು ಹಿಡಿದು ಒಂದೆಡೆ
ನಿಲಿಸಿ ತೊಳೆದಿದೆ ಹೂವಿದು
ಚೆಲುವು ಬಾಳನು ಹಸನುಗೊಳಿಸುವ
ಅಚ್ಚರಿಯ ಪರಿ ಎಂಥದು!

9. ಆಕಾಶದಲ್ಲಿ ತಾರೆಗಳಿಗಿಂತ ಮೊದಲು ಬೆಳಗುವುದು ಇದು
(1) ಮೋಡ
(2) ಮಲ್ಲಿಗೆ
(3) ಬೆಳ್ಳಿ
(4) ಮಿಂಚು

10. ಅರಳಿ ನಿಂತ ಮಲ್ಲಿಗೆ ಇವರ ನಲ್ನುಡಿಯಂತೆ ಎಂದು ಕವಿ ಹೇಳಿದ್ದಾರೆ
(1) ಕವಿ
(2) ಸತ್ವಶೀಲ
(3) ಮುಗುದೆ
(4) ರಾಜ

11. ತನಗೆ ತಾನೇ ಮೂಡಿದ ಮಲ್ಲಿಗೆ ಹೂ ಕವಿಗೆ ಹೀಗೆ ಕಂಡಿದೆ
(1) ಕುಶಲ ಕಲೆಯಂತೆ
(2) ಕುಶಲ ಕಲ್ಪನೆಯಂತೆ
(3) ಕವಿಯ ಮನಸಿನಂತೆ
(4) ಹಚ್ಚನೆ ಹಸುರಿನಂತೆ

Prepp
Your Personal Exams Guide

12. ನವಿರಾಗಿರುವ ಮಲ್ಲಿಗೆಯ ದಳಗಳು ಇವರು ಕಾಣುವ ಕನಸಿನ ಹಾಗೆ ಇದೆ

(1) ಮಹಾತ್ಮರು (2) ಚೆಲುವೆ

(3) ಕವಿ (4) ಹಸುಳೆ

13. ಮಲ್ಲಿಗೆ ಹೂ ಇದನ್ನು ಒಂದೆಡೆ ನಿಲ್ಲಿಸಿ ತೊಳೆಯಿತು ಎಂದು ಕವಿ ಹೇಳುತ್ತಾರೆ

(1) ಹಾರುವ ದುಂಬಿಗಳನ್ನು (2) ಹಾಡುವ ಕೋಗಿಲೆಯನ್ನು

(3) ಬೀಸುವ ಗಾಳಿಯನ್ನು (4) ಹರಿವ ಮನವನ್ನು

14. 'ಇಷ್ಟು' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ

(1) ದಿಗ್ವಾಚಕ (2) ಗುಣವಾಚಕ

(3) ಪರಿಮಾಣವಾಚಕ (4) ಸಂಖ್ಯಾವಾಚಕ

15. 'ಕವಿಯ' ಈ ಪದದಲ್ಲಿರುವ ವಿಭಕ್ತಿ

(1) ಷಷ್ಠೀ ವಿಭಕ್ತಿ (2) ಪ್ರಥಮಾ ವಿಭಕ್ತಿ

(3) ಸಪ್ತಮೀ ವಿಭಕ್ತಿ (4) ಚತುರ್ಥೀ ವಿಭಕ್ತಿ

16. ಭಾಷಾಬೋಧನೆ ಮತ್ತು ಕಲಿಕೆಯಲ್ಲಿ ಅವಶ್ಯವಾಗಿ ಪಾಲಿಸಬೇಕಾದ ನಿಯಮ

(1) ಕಂಠಪಾಠ ಮತ್ತು ಪುನರಾವರ್ತನ ನಿಯಮ

(2) ಅನುಕರಣೆ ಮತ್ತು ಅಭ್ಯಾಸ ನಿಯಮ

(3) ಸಿದ್ಧತೆ ಮತ್ತು ಪ್ರೇರಣಾ ನಿಯಮ

(4) ಅನುವಂಶೀಯತೆ ಮತ್ತು ಅನುಭವ ನಿಯಮ

17. 'ಸಾಕ್ರಟೀಸ್ ಪದ್ಧತಿ' ಎಂದೇ ಹೆಸರಾಗಿರುವ ಪದ್ಧತಿ

(1) ಅನ್ವೇಷಣ ಪದ್ಧತಿ (2) ಪ್ರಶ್ನೋತ್ತರ ಪದ್ಧತಿ

(3) ನಿಗಮನ ಪದ್ಧತಿ (4) ಸ್ವಯಂ ಬೋಧಿನಿ ಪದ್ಧತಿ

18. ಇವುಗಳಲ್ಲಿ ಭಾಷಾ ಆಟಗಳಿಗೆ ಹೊರತಾದದ್ದು Deleted

(1) ಚರ್ಚಾಸ್ಪರ್ಧೆ

(2) ಪದಬಂಧ

(3) ಅಂತ್ಯಾಕ್ಷರಿ

(4) ಒಗಟು ಬಿಡಿಸುವುದು

www.prepp.in

Prepp
Your Personal Exams Guide

19. ಪ್ರಾಥಮಿಕ ಹಂತದಲ್ಲಿ ಓದು-ಬರಹ ಕಲಿಸಲು ಅಳವಡಿಸಬೇಕಾದ ಕ್ರಮ
   (1) ಅನುಕರಣೆ ಮತ್ತು ಅಭ್ಯಾಸಗಳು
   (2) ದೋಷವನ್ನು ಗುರ್ತಿಸುವುದು
   (3) ಕಾಗುಣಿತವನ್ನು ಪರಿಗಣಿಸದೆ ಅಭ್ಯಾಸ ಮಾಡಿಸುವುದು
   (4) ಯಾಂತ್ರಿಕವಾಗಿ ಕಲಿಸುವುದು

20. ಅಕ್ಷರ ಮತ್ತು ಪದ ಜೋಡಣೆ ಕಲಿಸುವ ಪ್ರಮುಖ ಸಾಧನ
   (1) ಉಕ್ತಲೇಖನ
   (2) ಚಿತ್ರ ಬರೆಯುವ ಅಭ್ಯಾಸ
   (3) ಪದಕೋಶಗಳ ಅಭ್ಯಾಸ
   (4) ಕಾಪಿ ಪುಸ್ತಕ ಅಭ್ಯಾಸ

21. ಸೂಕ್ಷ್ಮ ವಾಚನ ಎಂದರೆ
   (1) ಪಠ್ಯದ ಮುಖ್ಯಾಂಶಗಳನ್ನು ಓದುವುದು
   (2) ವೇಗವಾಗಿ ಓದುವುದು
   (3) ವಿಮರ್ಶಾತ್ಮಕ ದೃಷ್ಟಿಯಿಂದ ಓದುವುದು
   (4) ನಿರ್ದಿಷ್ಟ ಮಾಹಿತಿ/ಅಂಶವನ್ನು ಅನ್ವೇಷಿಸಲು ಓದುವುದು

22. ಉತ್ತಮ ಮಾತುಗಾರಿಕೆ ಕೌಶಲ ಬೆಳೆಸುವ ಚಟುವಟಿಕೆ
   (1) ಕಾಪಿ ಪುಸ್ತಕ ಅಭ್ಯಾಸ
   (2) ಪಾತ್ರಾಭಿನಯ ಚಟುವಟಿಕೆ
   (3) ದಿನಪತ್ರಿಕೆಗಳ ಸಂಗ್ರಹ
   (4) ವ್ಯಾಕರಣ ನಿಯಮಗಳ ಕಂಠಪಾಠ

23. ಇದು ಗದ್ಯಬೋಧನೆಯ ಪ್ರಮುಖ ಉದ್ದೇಶ
   (1) ಓದು, ಬರಹ, ಗ್ರಹಿಕೆ ಮತ್ತು ಅಭಿವ್ಯಕ್ತಿ ಸಾಮರ್ಥ್ಯ ಬೆಳೆಸುವುದು
   (2) ಆನಂದ, ಸೌಂದರ್ಯಪ್ರಜ್ಞೆ ಮತ್ತು ರಸಾಸ್ವಾದನೆ ಮೂಡಿಸುವುದು
   (3) ಗಾಯನ ಮತ್ತು ಅಭಿನಯ ಕೌಶಲಗಳಲ್ಲಿ ತರಬೇತಿ ನೀಡುವುದು
   (4) ಗದ್ಯದಲ್ಲಿನ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಠಪಾಠ ಮಾಡಿಸುವುದು

24. ಗಮಕ ಕಲೆ ಎಂಬುದು
   (1) ಪದ್ಯದ ರೂಪಾಂತರ
   (2) ಪದ್ಯದ ವಿಮರ್ಶೆ
   (3) ಕಾವ್ಯದ ಗಾಯನ
   (4) ಕವಿಯ ಸ್ಫೂರ್ತಿ

www.prepp.in

Prepp
Your Personal Exams Guide

25. ಪರಿಹಾರ ಬೋಧನೆಯಲ್ಲಿ ಶಿಕ್ಷಕರು ಮುಖ್ಯವಾಗಿ ಪಾಲಿಸಬೇಕಾದ ಕ್ರಮ
   (1) ನಿಯಂತ್ರಿತ ಅಭ್ಯಾಸ ಮಾಡಿಸುವುದು
   (2) ಎಲ್ಲಾ ಪಾಠಗಳನ್ನು ಕೇವಲ ಬೋಧನೆ ಮಾಡುವುದು
   (3) ಕಲಿಕಾ ಸಾಮರ್ಥ್ಯದಲ್ಲಿ ಕಂಡು ಬರುವ ದೋಷ ನಿವಾರಣೆ ಮಾಡುವುದು
   (4) ವಿದ್ಯಾರ್ಥಿಗಳು ತಾವೇ ಅಭ್ಯಾಸ ಮಾಡಲು ಮಾರ್ಗದರ್ಶಿಸುವುದು

26. ನೀಲ ನಕಾಶೆಯಿಂದಾಗುವ ಪ್ರಯೋಜನಗಳಲ್ಲಿ ಇದು ಸೇರಿಲ್ಲ.
   (1) ಪ್ರಶ್ನೆ ಪತ್ರಿಕೆ ರಚಿಸಲು ಮಾರ್ಗದರ್ಶನ ನೀಡುತ್ತದೆ
   (2) ಪ್ರಶ್ನೆ ಪತ್ರಿಕೆ ರಚನೆಯಲ್ಲಿ ಗೊಂದಲವನ್ನುಂಟು ಮಾಡುತ್ತದೆ
   (3) ಪ್ರಶ್ನೆಗಳ ಪುನರಾವರ್ತನೆಯನ್ನು ತಡೆಯುತ್ತದೆ
   (4) ವಿವಿಧ ಉದ್ದೇಶಗಳಿಗನುಗುಣವಾಗಿ ವಿವಿಧ ರೀತಿಯ ಪ್ರಶ್ನೆಗಳನ್ನು ರಚಿಸಲು ನೆರವಾಗುತ್ತದೆ

27. 6ನೇ ತರಗತಿಯಲ್ಲಿ 10 ಜನ ವಿದ್ಯಾರ್ಥಿಗಳು ಕನ್ನಡವನ್ನು ಸರಾಗವಾಗಿ ಓದಲು ಶಕ್ತರಿಲ್ಲ. ಈ ಸಮಸ್ಯೆಯನ್ನು ಪರಿಹರಿಸಲು ಶಿಕ್ಷಕನು ಕೈಗೊಳ್ಳಬಹುದಾದ ತಕ್ಷಣದ ಪರಿಹಾರ ಕಾರ್ಯ
   (1) ಹೆಚ್ಚು ಪ್ರಮಾಣದ ಮನೆಗೆಲಸ ಅಭ್ಯಾಸಗಳನ್ನು ನೀಡುವುದು
   (2) ಸರಾಗವಾಗಿ ಓದುವ ಸಾಮರ್ಥ್ಯದ ಪ್ರಾಮುಖ್ಯತೆ ತಿಳಿಸುವುದು
   (3) ಕ್ರಿಯಾ ಸಂಶೋಧನೆ ಕೈಗೊಳ್ಳುವುದು
   (4) ಹಿಂದಿನ ತರಗತಿಯಲ್ಲೇ ಉಳಿಸುವುದು

28. 'ಹೆಮ್ಮರ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ
   (1) ಕರ್ಮಧಾರಯ
   (2) ತತ್ಪುರುಷ
   (3) ಬಹುವ್ರೀಹಿ
   (4) ದ್ವಂದ್ವ

29. 'ಮೃಗ' ಈ ಪದದ ತದ್ಭವ ರೂಪ ಇದಾಗಿದೆ
   (1) ಖಗ
   (2) ಮೊಗ
   (3) ಮಗ
   (4) ಮಿಗ

30. 'ಹೊಟ್ಟು ಕುಟ್ಟು' ಈ ನುಡಿಗಟ್ಟಿನ ಅರ್ಥ ಹೀಗಿದೆ
   (1) ಉಪಯೋಗವಿರದ ಕೆಲಸ ಮಾಡು
   (2) ಹೊಗಳಿ ಉಬ್ಬಿಸು
   (3) ತಪ್ಪು ಕೆಲಸ ಮಾಡು
   (4) ತುಂಟಾಟ ಮಾಡು

www.prepp.in

Prepp
Your Personal Exams Guide

# PART – I
## Language – I
## ENGLISH

**Read the passage given below and answer questions from 1 to 8.**

An ecosystem is a group of animals and plants living in a specific region and interacting with one another and with their physical environment. Ecosystems include physical and chemical components, such as soils, water and nutrients that support the organisms living there. These organisms may range from large animals to micro-organisms. Ecosystems can also be thought of as the interactions among all organisms in a given habitat; for instance one species may serve as food for another. People are part of ecosystems where they live and work.

Human activities can harm or destroy local ecosystems unless actions such as land development for housing or businesses are carefully planned to conserve and sustain the ecology of the area. An important part of ecosystem management involves finding ways to protect and enhance economic and social well-being while protecting local ecosystems.

1. Unplanned human activities that can destroy the ecosystem are
   (1) humans interacting with other large organisms
   (2) housing and business
   (3) interaction of man with microscopic animals
   (4) involving in protection of local ecosystems

2. 'Man has to increase the ____________ activities to sustain the ecology of the area'. The correct form of the word to be filled in the blank is
   (1) conserve
   (2) conserved
   (3) conservation
   (4) conserves

3. 'Ecosystem management involves in finding ways to protect and increase well-being of local ecosystems'. The word that is an example for an adjective is
   (1) ecosystem
   (2) management
   (3) protect
   (4) local

4. a. Specific — i. Activities
   b. Human — ii. Component
   c. Chemical — iii. Development
   d. Land — iv. Region

   The correct pair of collocating words to be formed as found in the passage are
   (1) a – iv; b – i; c – ii; d – iii
   (2) a – i; b – ii; c – iii; d – iv
   (3) a – iv; b – iii; c – ii; d – i
   (4) a – ii; b – iv; c – i; d – iii

www.prepp.in

5. An ecosystem can be defined as
(1) a physical area with its organisms
(2) an interaction of all living organisms with their physical environment
(3) human activities for socio-economic progress
(4) all large animals and micro-organisms in the environment

6. The given passage
(1) elaborates on the physical and chemical components of the environment
(2) defines ecosystem and the need to manage it
(3) defines all human activities
(4) explains about the environmental damage caused by human activities

7. The term used in the passage to find ways to protect local ecosystem without hindering socio-economic progress is
(1) Ecology
(2) Ecosystem
(3) Ecosystem management
(4) Local ecosystem

8. The statement that is true with respect to the passage is
(1) Physical and chemical components of an ecosystem supports the organisms living in it.
(2) An individual of a species feeds only on another individual of the same species.
(3) Man as an animal is not included in the ecosystem.
(4) Ecosystem refers to the relationship between a prey and its predator.

**Read the text below and answer questions from 9 to 15.**

**The Violet**

Down in a green and shady bed,
A modest violet grew,
Its stalk was bent, it hung its head,
As if to hide from view

And yet it was a lovely flower,
Its colours bright and fair;
It might have graced a rosy bower,
Instead of hiding there

www.prepp.in

Prepp
Your Personal Exams Guide

Yet there it was content to bloom,
In modest tints arrayed;
And there diffused its sweet perfume,
Within the silent shade

Then let me to the valley go,
This pretty flower to see;
That I may also learn to grow
In sweet humility

– Jane Taylor

9. The poet went to the valley to
   (1) pluck the fruits
   (2) buy the plants
   (3) see the flower
   (4) sell the flowers

10. The correct prefix to be added to the word 'learn' is
   (1) un
   (2) in
   (3) im
   (4) ir

11. 'I may also learn to grow'. To infinitive in the above sentence is
   (1) to grow
   (2) grow
   (3) learn
   (4) may

12. The violet in this poem is a/an
   (1) girl
   (2) flower
   (3) bird
   (4) colour

13. 'The violet is lovely, bright and fair where as it hides itself ?' This brings out the violet's nature of
   (1) silence and timidity
   (2) pride and arrogance
   (3) modesty and humility
   (4) shame and shiness

14. Violet hung its head as if
   (1) it was so shy
   (2) it was sleepy
   (3) to hide from view
   (4) it was so inactive

15. 'A <u>modest</u> violet grew'
   The underlined word is a/an
   (1) adjective
   (2) verb
   (3) adverb
   (4) noun

www.prepp.in

Prepp
Your Personal Exams Guide

**Answer the questions from 16 to 30 choosing the most appropriate option, following the given directions.**

16. '__________ Ganga is ________ sacred river'. The correct articles to be filled in the blanks are
(1) A, an (2) The, a (3) A, the (4) An, the

17. 'He is the doctor _____ treated my sister'. The correct linker to be filled in the blank is
(1) who (2) when (3) where (4) why

18. 'Indians play Cricket, _________'. The correct question tag to be added is
(1) aren't they ? (2) isn't they ?
(3) don't they ? (4) do they ?

19. 'We are investigating the mystery'
The passive form of the above sentence is
(1) The mystery was being investigated by us
(2) The mystery will be investigated by us
(3) The mystery has been investigated by us
(4) The mystery is being investigated by us

20. Rama said to Arjun in anger, "Go away".
The above sentence can be reported as
(1) Rama requested Arjun to go away
(2) Rama ordered Arjun not to go away
(3) Rama ordered Arjun to go away
(4) Rama advised Arjun to go away

21. 'Methods of Teaching English' is one of the prime areas in any professional teaching course. This component orients to apply the various elements contributing to
(1) effective use of language in teaching
(2) effective ways of developing English
(3) increase vocabulary of English language
(4) teaching and learning of all subjects

22. Although there was teaching for hundreds of years, language teaching came into its own as a profession
(1) in the twenty first century (2) in the twelfth century
(3) in the twentieth century (4) in the sixteenth century

www.prepp.in

Prepp
Your Personal Exams Guide

23. There are different types of writing which depend on the purpose. The aim of persuasive writing is
    (1) to confuse the reader
    (2) to pressurize the reader
    (3) to convince the reader
    (4) to encourage the reader

24. Nouns, main verbs other than be, adjectives, adverbs, the words yes and no, interrogative words are
    (1) high frequency words
    (2) important words
    (3) common words
    (4) content words

25. Connecting all the supporting sentences to the topic sentence is called
    (1) unity
    (2) uniformity
    (3) cohesion
    (4) accuracy

26. While reading, finding a particular piece of information involves
    (1) intensive reading
    (2) scanning
    (3) skimming
    (4) extensive reading

27. Read the given text and answer the questions that follow. This activity is a part of
    (1) pre reading task
    (2) memory based task
    (3) while reading task
    (4) listening task

28. Using more of videos in an English class takes care of the needs of
    (1) only visual learners
    (2) auditory and visual learners
    (3) only auditory learners
    (4) all types of learners

29. A list that contains a set of statements related to what a student is expected to do to improve his/her language ability is named as
    (1) opinionaire
    (2) check list
    (3) survey tool
    (4) questionnaire

30. Imagine there are some low proficient learners in the class and the teacher is planning to undertake some easy and effective strategy to make them learn. Which one of the following type of activity should he/she choose ?
    (1) guest lecture
    (2) self study
    (3) peer teaching
    (4) reference tasks

## PART – II

### ಭಾಷೆ – II

### ಕನ್ನಡ

**ಸೂಚನೆ :** ಈ ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ, ಕೇಳಿರುವ ಪ್ರಶ್ನೆಗಳಿಗೆ (31 ರಿಂದ 38) ಉತ್ತರಿಸಿರಿ.

ಚಗಳಿ ಇರುವೆಗಳನ್ನು ಬಿಟ್ಟರೆ ಎರಡನೆಯ ಅಸಾಧಾರಣ ಇರುವೆ ಎಂದರೆ ಜೇನುಕುಡಿಕೆ ಇರುವೆ. ಆಫ್ರಿಕಾ, ಆಸ್ಟ್ರೇಲಿಯಾ, ಅಮೇರಿಕಾ ಖಂಡಗಳಲ್ಲಿ ಅರೆ–ಮರಳುಗಾಡು ಪ್ರದೇಶದಲ್ಲಿ ವಾಸಿಸುವ ಈ ಇರುವೆ ತನ್ನ ಆಹಾರ ಸಂಗ್ರಹಣಾ ವಿಧಾನದಿಂದ ಪ್ರಸಿದ್ಧವಾಗಿದೆ. ಸಂಗ್ರಹಿಸಿದ ಮಧುವನ್ನು ಶೇಖರಿಸಿ ಇಡಲು ಜೇನಿನಂತೆ ಮೇಣ ಉತ್ಪತ್ತಿ ಮಾಡುವ ಗ್ರಂಥಿಗಳು ಈ ಇರುವೆಗಳಿಗೆ ಇಲ್ಲ. ಹೀಗಾಗಿ ಇವಕ್ಕೆ ಜೇನುಗಳಂತೆ ಮೇಣದ ತಟ್ಟೆಗಳನ್ನು ಕಟ್ಟಲು ಬರುವುದಿಲ್ಲ. ಅದರ ಬದಲು ಇವು ತಮ್ಮ ಹೊಟ್ಟೆಯಲ್ಲೇ ಅಪಾರ ಪ್ರಮಾಣದ ಮಧುವನ್ನು ಸಂಗ್ರಹಿಸಿಟ್ಟುಕೊಳ್ಳಬಲ್ಲವು.

ಈ ಇರುವೆಗಳು ಚಗಳಿ ಇರುವೆಗಳಂತೆ ಮರದ ಮೇಲೆ ಗೂಡು ಮಾಡದೆ ನೆಲದಲ್ಲಿ ಗೂಡು ಮಾಡುತ್ತವೆ. ಈ ಇರುವೆಗಳು ನಿಶಾಚರ ಕೀಟಗಳು. ರಾತ್ರಿಯಾಗುತ್ತಲೂ ಬಿಲದಿಂದ ಹೊರಬಂದು ಮಧು ಸಂಗ್ರಹಿಸಲು ಹೊರಡುತ್ತವೆ. ಜೇನುಗಳಂತೆ ಇವು ಮಧು ಸಂಗ್ರಹಿಸುವುದಿಲ್ಲ. ರಾತ್ರಿ ಹೊತ್ತಿನಲ್ಲಿ ಹೂವಿನಿಂದ ಸಂಗ್ರಹಿಸುವುದು ಸಾಧ್ಯವೂ ಇಲ್ಲ. ಸಾಧಾರಣವಾಗಿ ಮರಳುಗಾಡಿನ ಅಂಚಿನಲ್ಲಿ ಬೆಳೆಯುವ ಓಕ್ ಮರದ ತೊಗಟೆಯ ಮೇಲೆ ರೂಪುಗೊಳ್ಳುವ ಗಡ್ಡೆಗಳಿಂದ ಇವು ಮಧುವನ್ನು ಸಂಗ್ರಹಿಸುತ್ತವೆ. ಈ ಮರದ ಗಡ್ಡೆಗಳು ಸ್ವಾಭಾವಿಕವಾದುದಲ್ಲ. ಸಿನೆಪಿಡ್ ಜಾತಿಯ ಕಣಜ ಈ ಗಡ್ಡೆಗಳಿಗೆ ಕಾರಣ. ಈ ಕಣಜ ಓಕ್ ಮರದ ತೊಗಟೆಯ ಮೇಲೆ ಮೊಟ್ಟೆಗಳನ್ನಿಡುತ್ತವೆ. ಮೊಟ್ಟೆಯೊಡೆದು ಹೊರಬರುವ ಕಣಜದ ಲಾರ್ವ ತೊಗಟೆಯನ್ನು ಕೊರೆದು ಒಳಕ್ಕೆ ಹೋಗಿ ಅಲ್ಲಿ ಗಿಡದ ರಸ ಹೀರುತ್ತಾ ಬೆಳೆಯುತ್ತದೆ. ಕಣಜದ ಮರಿಗಳು ಗಿಡದ ತೊಗಟೆಯಲ್ಲಿ ತುರಿಕೆ ಉಂಟುಮಾಡುವುದರಿಂದ ತೊಗಟೆಯ ಮೇಲೆ ಕಜ್ಜಿ ಎದ್ದಂತೆ ಚಿಕ್ಕಚಿಕ್ಕ ಗುಳ್ಳೆಗಳೆದ್ದು ಅವೇ ಸಣ್ಣಸಣ್ಣ ಗಡ್ಡೆಗಳಾಗಿ ರೂಪುಗೊಳ್ಳುತ್ತವೆ. ಕಣಜದ ಮರಿಗಳು ಹೊರಬಿದ್ದ ಮೇಲೆ ಖಾಲಿಯಿರುವ ಗಡ್ಡೆಗಳ ಟೊಳ್ಳಿನೊಳಗೆ ಗಿಡದಿಂದ ಒಸರುವ ಸಿಹಿಯಾದ ದ್ರವ ಶೇಖರವಾಗುತ್ತದೆ. ಈ ಮಧುವೇ ಜೇನುಕುಡಿಕೆ ಇರುವೆಗಳ ಪ್ರಧಾನ ಆಹಾರ.

**31.** ಇದು ಓಕ್ ಮರದ ತೊಗಟೆಯನ್ನು ಕೊರೆದು ಒಳಕ್ಕೆ ಹೋಗಿ ಅಲ್ಲಿ ಗಿಡದ ರಸ ಹೀರುತ್ತಾ ಬೆಳೆಯುತ್ತದೆ.

(1) ಜೇನುಹುಳ
(2) ಇರುವೆಗಳು
(3) ಕಣಜದ ಲಾರ್ವ
(4) ಮರಕುಟಿಕ

**32.** ಜೇನುಕುಡಿಕೆ ಇರುವೆಗಳು ಈ ರೀತಿಯ ಕೀಟಗಳು.

(1) ಪಿಶಾಚ ಕೀಟಗಳು
(2) ಹಗಲು ಕೀಟಗಳು
(3) ಗೆದ್ದಲು ಕೀಟಗಳು
(4) ನಿಶಾಚರ ಕೀಟಗಳು

**33.** ಜೇನುಕುಡಿಕೆ ಇರುವೆಗಳು ಅಪಾರ ಪ್ರಮಾಣದ ಮಧುವನ್ನು ಇಲ್ಲಿ ಸಂಗ್ರಹಿಸಿಟ್ಟುಕೊಳ್ಳುತ್ತವೆ.

(1) ಹೊಟ್ಟೆಯಲ್ಲಿ
(2) ಗೂಡಿನಲ್ಲಿ
(3) ಬಿಲದಲ್ಲಿ
(4) ಮರದಲ್ಲಿ

www.prepp.in

Prepp
Your Personal Exams Guide

**34.** ಜೇನುಕುಡಿಕೆ ಇರುವೆಗಳು ಸಾಧಾರಣವಾಗಿ ಈ ಮರದ ತೊಗಟೆಯ ಮೇಲೆ ರೂಪುಗೊಳ್ಳುವ ಗಡ್ಡೆಗಳಿಂದ ಮಧುವನ್ನು ಸಂಗ್ರಹಿಸುತ್ತವೆ.

(1) ಮಾವಿನ ಮರ
(2) ಹಲಸಿನ ಮರ
(3) ಓಕ್ ಮರ
(4) ಬೇವಿನ ಮರ

**35.** ಜೇನುಕುಡಿಕೆ ಇರುವೆಗಳು ಈ ಪ್ರದೇಶದಲ್ಲಿ ವಾಸಿಸುತ್ತವೆ.

(1) ಜವುಗು
(2) ಹಿಮಪರ್ವತ
(3) ಮಲೆನಾಡು
(4) ಅರೆ ಮರಳುಗಾಡು

**36.** ಕಣಜದ ಮರಿಗಳು ಹೊರಬಿದ್ದ ಮೇಲೆ ಖಾಲಿಯಿರುವ ಗಡ್ಡೆಗಳ ಟೊಳ್ಳಿನೊಳಗೆ ಈ ದ್ರವ ಶೇಖರವಾಗುತ್ತದೆ.

(1) ಮಳೆನೀರಿನ ದ್ರವ
(2) ಜೇನುಹುಳು ಸಂಗ್ರಹಿಸುವ ದ್ರವ
(3) ಇರುವೆಗಳು ಬಿಡುವ ದ್ರವ
(4) ಗಿಡದಿಂದ ಒಸರುವ ಸಿಹಿ ದ್ರವ

**37.** 'ಚಿಕ್ಕಚಿಕ್ಕ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ.

(1) ದ್ವಿರುಕ್ತಿ
(2) ಜೋಡಿಪದ
(3) ಅನುಕರಣಾವ್ಯಯ
(4) ಪ್ರತಿಧ್ವನಿ ಪದ

**38.** 'ಮರಳುಗಾಡು' ಪದದಲ್ಲಿ ಆಗಿರುವ ಸಂಧಿ.

(1) ಆದೇಶ ಸಂಧಿ
(2) ಲೋಪಸಂಧಿ
(3) ಆಗಮಸಂಧಿ
(4) ಸವರ್ಣದೀರ್ಘ ಸಂಧಿ

**ಸೂಚನೆ : ಈ ಕೆಳಗೆ ಕೊಟ್ಟಿರುವ ಪದ್ಯವನ್ನು ಓದಿ, ಕೇಳಿರುವ ಪ್ರಶ್ನೆಗಳಿಗೆ (39 ರಿಂದ 45) ಉತ್ತರಿಸಿ.**

ಸ್ವರ್ಗವು ಬೇಕೋ ? ನರಕವು ಬೇಕೋ ?
ಯಾವುದು ಬೇಕಪ್ಪಾ ?
ಸ್ವರ್ಗದ ಸಿದ್ಧೀ ನರಕದ ಸುದ್ದೀ
ಎರಡೂ ಸಾಕಪ್ಪಾ !
ನಾವೇನಯ್ಯಾ ಸಾದಾ ಮಂದಿ
ಕಲಿತದ್ದೇ ಅಷ್ಟು;

www.prepp.in

Prepp
Your Personal Exams Guide

ಕಾರ್‌ವಾರ್‌ದಿಂದಾ ಮೈಸೂರ್‌ವರೆಗೇ
ನಮ್ಮದು ವೈವಾಟು.
ಸ್ವರ್ಗದೊಳಯ್ಯಾ ಅಮೃತವೊಂದೇ
ಸೇವಿಸಬೇಕಂತೆ !
ಅಮೃತವನ್ನೇ ಭೋಜನವೆಂದು
ಭಾವಿಸಬೇಕಂತೆ !
ಸವಿಯಾದಮೃತ ಸವಿದೂ ಸವಿದೂ
ಬೇಸರವಿಲ್ಲೇನೋ ?
ಸವಿಯೇತಿಂದರೆ ಮೈಯಿಗೆ ಕಜ್ಜಿ
ಆಗುವುದಿಲ್ಲೇನೋ ?
ಉಳ್ಳಾಗಡ್ಡೀ ಜೋಳದ ಭಕ್ರೀ
ಕನ್ನಡಿಗರ ಸ್ವರ್ಗಾ !
ರಾಗಿಯ ಮುದ್ದೆಯೆ ಮೈಸೂರ್ ಗೌಡಗೆ
ಸುಖದಾಯಕ ಮಾರ್ಗಾ !
ಕುಚ್ಚಿಗೆ ಅಕ್ಕೀ ಮೀನಿನ ಪಳದೀ
ಕಾರ್‌ವಾರ್ ಜನಕೆಲ್ಲಾ,
ಈ ತರದೂಟಾ ಕಣ್ಣಿಗೆ ಕಾಣಾ,
ಸ್ವರ್ಗದ ಮೇಲಿಲ್ಲಾ !
ಎಂಥಾ ಸ್ವರ್ಗಾ ! ಎಂಥಾ ನರಕಾ !
ಸುಮ್ಮನೆ ತಲೆಬೇನೆ !
ಇಹಲೋಕದೊಳೇ ನಂಬಿಗೆಯಿದ್ದರೆ
ನರಕವ ನಾ ಕಾಣೆ

39. ಕವಿಗೆ ಯಾವುದು ಸಾಕಾಗಿದೆ ?
(1) ನರಕದ ಸುದ್ದಿ
(2) ನರಕದ ಶುದ್ಧಿ
(3) ಸ್ವರ್ಗದ ಶುದ್ಧಿ
(4) ಭೂಮಿಯ ಸುದ್ದಿ

40. ಕವಿಯ ವೈವಾಟು ಎಲ್ಲಿಂದ ಎಲ್ಲಿಯವರೆಗಿದೆ ?
(1) ಮುಂಬೈನಿಂದ – ಮಂಗಳೂರು
(2) ಪುಣೆಯಿಂದ – ಗೋವಾ
(3) ಕಾರ್‌ವಾರ್‌ದಿಂದ – ಮೈಸೂರು
(4) ಕಾರ್‌ವಾರ್‌ದಿಂದ – ಕೇರಳ

41. ಕವಿಯ ಪ್ರಕಾರ ಅಮೃತವನ್ನೇ ಭೋಜನವೆಂದು ಸೇವಿಸುವ ಸ್ಥಳ ಇದಾಗಿದೆ.
(1) ಆಕಾಶ (2) ಭೂಮಿ (3) ನರಕ (4) ಸ್ವರ್ಗ

42. ಸವಿಯನ್ನೇ ತಿಂದರೆ ಮೈಗೆ ಇದು ಆಗುವುದಿಲ್ಲವೇನು ? ಎಂದು ಕವಿ ಕೇಳಿದ್ದಾರೆ.
(1) ಕಜ್ಜಿ (2) ಕೆಮ್ಮು (3) ಶೀತ (4) ಜ್ವರ

43. ಉಳ್ಳಾಗಡ್ಡೀ ಜೋಳದ ಭಕ್ರಿ ಇವರ ಸ್ವರ್ಗವಾಗಿದೆ.
(1) ಕೊಂಕಣಿಗರ
(2) ಮರಾಠಿಯವರ
(3) ಕನ್ನಡಿಗರ
(4) ಮಲೆಯಾಳಿಗಳ

44. ಸ್ವರ್ಗ ಪದದ ತದ್ಭವ ರೂಪ ಇದು
(1) ಸ್ವರ್ಗಮ್ (2) ಸರ್ಗ (3) ಸಗ್ಗ (4) ಸಾಗ

45. 'ಇಹಲೋಕ' ಪದದ ವಿರುದ್ಧ ಪದ ಇದು
(1) ಭೂಲೋಕ
(2) ಪರಲೋಕ
(3) ಪಾತಾಳಲೋಕ
(4) ತ್ರಿಲೋಕ

46. ಶಿಕ್ಷಕನು ತನ್ನ ಕಾರ್ಯ ಕ್ಷೇತ್ರದಲ್ಲಿ ಎದುರಾಗುವ ಸಮಸ್ಯೆಗಳಿಗೆ ತಾನೆ ತಕ್ಷಣ ಪರಿಹಾರ ಕಂಡುಕೊಳ್ಳಲು ಸಹಾಯಕವಾಗಿರುವ ವೈಜ್ಞಾನಿಕ ಕಾರ್ಯವಿದು
(1) ಕ್ರಿಯಾ ಸಂಶೋಧನೆ
(2) ಕ್ರಿಯಾ ಯೋಜನೆ
(3) ಪಾಠ ಯೋಜನೆ
(4) ಪರಿಹಾರ ಬೋಧನೆ

47. ಪ್ರೌಢಶಾಲಾ ಮಕ್ಕಳಿಗೆ ವ್ಯಾಕರಣ ಬೋಧನೆ ಮಾಡಲು ಅತಿ ಸೂಕ್ತವಾದ ಬೋಧನಾ ಪದ್ಧತಿ
(1) ನಿಗಮನ ಪದ್ಧತಿ
(2) ಅನುಗಮನ ಪದ್ಧತಿ
(3) ಮೇಲ್ವಿಚಾರಣ ಪದ್ಧತಿ
(4) ಪ್ರಶ್ನೋತ್ತರ ಪದ್ಧತಿ

48. 'ಚಂಪೂಕಾವ್ಯ' ಎಂದರೆ
(1) ಗದ್ಯದ ಬೋಧನೆ
(2) ಪದ್ಯ ಮತ್ತು ವ್ಯಾಕರಣ ಸಮ್ಮಿಶ್ರಣ
(3) ಪದ್ಯ ಮತ್ತು ಗದ್ಯಗಳಿಂದ ಕೂಡಿರುವುದು
(4) ಗದ್ಯ ಮತ್ತು ವ್ಯಾಕರಣ ಸಮ್ಮಿಶ್ರಣ

49. ಸಾಮಾಜಿಕ ಕಳಕಳಿಯಿಂದ ತುಂಬಿದ ನಿರ್ದಿಷ್ಟ ಸಂದೇಶಗಳನ್ನು ಹೊತ್ತ ವಿಚಾರ ಪ್ರಚೋದಕ ನಾಟಕ ಪ್ರಬೇಧವಿದು
(1) ಛಾಯಾ ನಾಟಕಗಳು
(2) ಮೂಕ ನಾಟಕಗಳು
(3) ಪ್ರಸಾರ ನಾಟಕಗಳು
(4) ಬೀದಿ ನಾಟಕಗಳು

www.prepp.in

Prepp Your Personal Exams Guide

50. ಅಭ್ಯಾಸ ಪುಸ್ತಕದ ಮುಖ್ಯ ಸ್ವರೂಪವೇನೆಂದರೆ

(1) ಮುಖ್ಯೋಪಾಧ್ಯಾಯರಿಗೆ ಮಾರ್ಗದರ್ಶನ ನೀಡುವುದು

(2) ವಿದ್ಯಾರ್ಥಿಗಳ ಕಲಿಕೆಯಲ್ಲಿ ಕಂಡುಬರುವ ನ್ಯೂನತೆಗಳನ್ನು ಗುರ್ತಿಸುವುದು

(3) ಶಿಕ್ಷಕರ ಬೋಧನೆಯಲ್ಲಿ ಕಂಡುಬರುವ ನ್ಯೂನತೆಗಳನ್ನು ಗುರ್ತಿಸುವುದು

(4) ವಿದ್ಯಾರ್ಥಿಗಳ ಸ್ವಯಂ ಅಧ್ಯಯನ ಮತ್ತು ಸ್ವಯಂ ಮೌಲ್ಯಮಾಪನಕ್ಕೆ ಸಹಾಯಕವಾಗಿರುವುದು

51. ಕಲಿಸುವ ಮತ್ತು ಕಲಿಕೆಯ ಪ್ರಕ್ರಿಯೆಯಲ್ಲಿ ಶೈಕ್ಷಣಿಕವಾಗಿ ಹಾಗೂ ಮನೋವೈಜ್ಞಾನಿಕವಾಗಿ ಕಲಿಕೆಯನ್ನು ಉತ್ತೇಜಿಸುವ ಸಾಧನ

(1) ದೃಕ್-ಶ್ರವಣೋಪಕರಣಗಳು

(2) ಪಾಠ ಯೋಜನೆ

(3) ದೃಕ್ ಉಪಕರಣಗಳು

(4) ಶ್ರವಣೋಪಕರಣಗಳು

52. ಸ್ಪಷ್ಟವಾದ ಉಚ್ಚಾರ, ಧ್ವನಿಯ ಏರಿಳಿತ, ವ್ಯಾಕರಣಬದ್ಧ ಹಾಗೂ ನಿರರ್ಗಳ ಮಾತುಗಾರಿಕೆಯ ಸಾಮರ್ಥ್ಯ ಇದರಿಂದ ಬೆಳೆಯುತ್ತದೆ.

(1) ಮೌನವಾಚನ

(2) ಸ್ಥೂಲವಾಚನ

(3) ಗಟ್ಟಿವಾಚನ

(4) ಸೂಕ್ಷ್ಮವಾಚನ

53. 'ಪರಿಶೋಧನಾತ್ಮಕವಾಗಿ ಪ್ರಶ್ನಿಸುವ ಕೌಶಲದ ಘಟಕಾಂಶಗಳ ಗುಂಪಿಗೆ ಇದು ಸೇರಿಲ್ಲ

(1) ಸುಳಿವು ನೀಡುವುದು

(2) ಸುಲಭ, ಸರಳ ಮತ್ತು ಆಸಕ್ತಿದಾಯಕವಾದುದು

(3) ವಿಮರ್ಶಾತ್ಮಕ ಅರಿವನ್ನು ಹೆಚ್ಚಿಸುವುದು

(4) ಹೆಚ್ಚಿನ ಮಾಹಿತಿ ಸಂಗ್ರಹಿಸುವುದು

54. ಸೂಕ್ಷ್ಮ ಓದುಗಾರಿಕೆಯ ಮುಖ್ಯ ಉದ್ದೇಶ ಇದಾಗಿದೆ

(1) ಸೀಮಿತ ಭಾಗವನ್ನು ತಳ ಸ್ಪರ್ಶಿಯಾಗಿ ಅಧ್ಯಯನ ಮಾಡುವುದು

(2) ವಿಷಯದ ತಾತ್ಪರ್ಯ, ಮುಖ್ಯಭಾವನೆ ಗ್ರಹಿಸುವುದು

(3) ಒಂದು ನಿರ್ದಿಷ್ಟ ಅಂಶ ಅಥವಾ ಒಂದು ಪ್ರಶ್ನೆಗೆ ಉತ್ತರವನ್ನು ಹುಡುಕುವುದು

(4) ಓದುವ ವಿಷಯದಲ್ಲಿ ಹೊಸತನ ಕಾಣುವುದು

www.prepp.in

Prepp
Your Personal Exams Guide

55. ಚರ್ಚಾ ಸ್ಪರ್ಧೆಯಲ್ಲಿ ಮಕ್ಕಳನ್ನು ಭಾಗವಹಿಸುವಂತೆ ಪ್ರೇರೇಪಿಸುವುದು ಈ ಕೌಶಲ ಬೆಳೆಸುವ ಸಲುವಾಗಿ
   (1) ಆಲಿಸುವ ಕೌಶಲ
   (2) ಮಾತುಗಾರಿಕೆಯ ಕೌಶಲ
   (3) ಮಾನಸಿಕ ಕೌಶಲ
   (4) ಟಿಪ್ಪಣಿ ಮಾಡಿಕೊಳ್ಳುವ ಕೌಶಲ

56. ಒಂದೇ ಅರ್ಥಕ್ಕೆ ಬೇರೆ ಬೇರೆ ಭಾಷೆಗಳಲ್ಲಿ ಬೇರೆ ಬೇರೆ ಧ್ವನಿ ವ್ಯತ್ಯಾಸಗಳಿರುತ್ತವೆ. ಈ ಭಾಷಾ ಸೃಷ್ಟಿಯ ಸ್ವಾತಂತ್ರ್ಯವನ್ನು ಭಾಷಾ ವಿಜ್ಞಾನಿ ಹಾಕೆಟ್ ಹೀಗೆ ಪ್ರಸ್ತಾಪಿಸಿದ್ದಾರೆ.
   (1) ಉತ್ಪಾದಕತೆ
   (2) ಪ್ರಾವೀಣ್ಯತೆ
   (3) ಯಾದೃಚ್ಛಿಕತೆ
   (4) ಸ್ಥಾನಪಲ್ಲಟ

57. ಉಕ್ತಲೇಖನದಿಂದ ವಿದ್ಯಾರ್ಥಿಗಳಿಗಾಗುವ ಪ್ರಯೋಜನ ಇದು
   (1) ತಪ್ಪು ಬರಹಕ್ಕೆ ಕಾರಣವಾಗುತ್ತದೆ
   (2) ವಿದ್ಯಾರ್ಥಿಗಳಲ್ಲಿ ಸೌಂದರ್ಯ ಪ್ರಜ್ಞೆ ಮೂಡಿಸುತ್ತದೆ
   (3) ತಪ್ಪಿಲ್ಲದೆ ಸುಸಂಬದ್ಧವಾಗಿ ಬರೆಯುವ ಅಭ್ಯಾಸ ಬೆಳೆಸುತ್ತದೆ
   (4) ಸಭಾ ಕಂಪನ ದೂರ ಮಾಡುತ್ತದೆ

58. ಶುದ್ಧ ಭಾಷಾ ಪ್ರಯೋಗದಿಂದ ಕೂಡಿದ ಪದವಿದು
   (1) ಭ್ರಷ್ಟಾಚಾರ
   (2) ಬ್ರಷ್ಠಾಚಾರ
   (3) ಬ್ರಶ್ಟಾಚಾರ
   (4) ಭ್ರಸ್ಟಾಚಾರ

59. ಈ ಕೆಳಗಿನ ಪದಗಳಲ್ಲಿ ಭವಿಷ್ಯತ್ ಕಾಲದ ಕ್ರಿಯಾಪದ ಇದು
   (1) ಹೋಗುತ್ತಿದ್ದಾನೆ
   (2) ಹೋದನು
   (3) ಹೋಗುವನು
   (4) ಹೋಗುತ್ತದೆ

60. 'ಅಂಗೈ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ
   (1) ತತ್ಪುರುಷ
   (2) ಕರ್ಮಧಾರಯ
   (3) ದ್ವಿಗು
   (4) ಅಂಶಿ

www.prepp.in

prepp
Your Personal Exams Guide

# PART – II
## Language – II
## ENGLISH

**Read the passage given below and answer questions from 31 to 38.**

### The Devoted Mother

A mother duck and her little ducklings were on their way to the lake one day. The ducklings were very happy following their mother and quack-quacking along the way. All of a sudden the mother duck saw a fox in the distance. She was frightened and shouted, "Children, hurry to the lake. There's a fox!"

The ducklings hurried towards the lake. The mother duck wondered what to do. She began to walk back and forth dragging one wing on the ground.

When the fox saw her he became happy and he said to himself, "looks like she's hurt and can't fly! I can easily catch and eat her !" Then he ran towards her.

The mother duck ran, leading the fox away from the lake. The fox followed her. Now he wouldn't be able to harm her ducklings. The mother duck looked towards her ducklings and saw that they had reached the lake. She was relieved. She stopped and took a deep breath.

The fox thought she was tired and he came closer, but the mother duck quickly spread her wings and rose up in the air. She landed in the middle of the lake and her ducklings swam to her.

The fox stared in disbelief at the mother duck and her ducklings. He could not reach them because they were in the middle of the lake. This way the duck fooled its enemy into thinking she was hurt and gave her children time to escape.

Dear children, some birds drag one of their wings on the ground when an enemy is going to attack. In this way they fool their enemies into thinking they are hurt, when the enemy follows them this gives their children time to escape.

**31.** The fox thought that the mother duck was hurt when the mother duck
(1) hurried towards the lake
(2) ran away from the lake
(3) began to walk back and forth dragging one wing on the ground
(4) reached the middle of the lake

**32.** The mother duck ran leading the fox away from the lake because
(1) it wanted to save its life
(2) it wanted to save its duckling's life
(3) it wanted the fox to be saved
(4) it wanted the fox to love the ducklings

www.prepp.in

Prepp
Your Personal Exams Guide

33. This story highlights
   (1) the greediness of the fox
   (2) the fox hunting the ducklings
   (3) the care of the mother duck
   (4) the wandering of the mother duck and the ducklings

34. The phrase "back and forth" means
   (1) to move first in one direction and then in the opposite one
   (2) to follow someone innocently
   (3) to enter by force
   (4) to do something again and again

35. The mother duck wondered what to do.
   The infinitive in the above sentence is
   (1) wondered (2) what to (3) do (4) to do

36. The word in the text which takes "dis" as a prefix is
   (1) happy (2) belief (3) lead (4) hurry

37. The mother duck stopped and took a deep breath.
   The part of speech of the underlined word in the given sentence is
   (1) Noun (2) Verb (3) Adverb (4) Adjective

38. The fox couldn't reach the ducklings because they were in the middle of the lake.
   The correct question to get the underlined words as answer is
   (1) Why couldn't the fox reach the ducklings ?
   (2) How did the fox reach the ducklings ?
   (3) When could the fox reach the ducklings ?
   (4) When couldn't the fox reach the ducklings ?

**Read the text below and answer questions from 39 to 45.**

**I WONDER**

– Jeannie Kirby

I wonder why the grass is green,
And why the wind is never seen ?
Who taught the birds to build a nest,
And told the trees to take a rest ?
O, when the moon is not quite round,
Where can the missing bit be found ?

www.prepp.in

Prepp
Your Personal Exams Guide

Who lights the stars, when they blow out,
And makes the lightning flash about ?
Who paints the rainbow in the sky
And hangs the fluffy clouds so high ?
Why is it now, do you suppose,
That Dad won't tell me, if he knows ?

39. The speaker in this poem is
(1) dad (2) son (3) mother (4) nature

40. The person is wondering
(1) Why the wind is never seen
(2) Why the trees are not taking rest
(3) Why somebody has bit off the moon
(4) Why there is a rainbow in the sky

41. The central idea of this poem is
(1) a child's curiosity
(2) elders do not know all answers
(3) funny things of nature
(4) one should have a keen desire to learn

42. 'Trees take a rest' means trees
(1) stop working for sometime
(2) lie down dead
(3) sit fixed to the ground
(4) should be cut down after some years

43. The rhyming word for 'wonder' is
(1) compounder (2) yonder
(3) all-rounder (4) founder

44. . . . . . . And hangs the fluffy clouds so high ? The underlined word is
(1) Verb (2) Adjective
(3) Noun (4) Adverb

45. The word "Won't" is the contracted form of
(1) Will not (2) Would not
(3) Was not (4) Were not

Prepp
Your Personal Exams Guide

**Answer the questions from 46 to 50 choosing the most appropriate option, following the given directions.**

46. 'The flour used to make bread ________ from a wheat plant'. The correct verb form to be filled in the blank is
(1) is (2) was (3) are (4) had

47. 'Can you ride a motorbike' This statement ends with
(1) . (2) ? (3) ! (4) ,

48. 'The economy of India is based ________ farming'. The correct preposition to be filled in the blank is
(1) in (2) on (3) with (4) from

49. 'Anush is the ____________ boy in the class'. The correct word to be filled in the blank is
(1) tall
(2) taller
(3) tallest
(4) too tall

50. 'The man is poor ________ honest'.
The correct linker to be filled in the blank is
(1) but (2) so (3) because (4) or

51. The abbreviation ELT stands for
(1) English Language Teaching
(2) Encouraging Language Teaching
(3) Enhancing Language Teaching
(4) English Learning Teaching

52. In the second language scenario, the focus is usually on
(1) fluency first
(2) accuracy first
(3) approaching first
(4) consistency first

53. 'There is a difference in the length of the vowel sounds'. This statement is
(1) False
(2) True
(3) Partially true
(4) Partially false

54. The number of diphthongs in English are
(1) Twelve (2) Three (3) Two (4) Eight

Prepp
Your Personal Exams Guide

55. "The topic sentence of the following paragraph is missing. Write an appropriate topic sentence after reading the rest of the paragraph".
The main objective of this task given by a teacher is to test
(1) Note making
(2) Creative writing
(3) Sequencing
(4) Reading comprehension

56. LAC approach is found to be an interesting area to ease the process of learning. If the context of language teaching, LAC stands for
(1) Learning According to Curriculum
(2) Language Across Curriculum
(3) Learning And Communication
(4) Listening Across Curriculum

57. A teacher uses many teaching-learning resources in the teaching of English. The more useful TLM in developing the vocabulary among the students is
(1) Grammar book
(2) Picture book
(3) Thesaurus
(4) Encyclopedia

58. There are many approaches and methods in language teaching. Among them, the one that focuses more on developing communication skills is
(1) Total Physical Response
(2) Communicative Language Teaching
(3) The Lexical Approach
(4) Content Based Instruction

59. Developing the reference skill among learners is required to become less-dependant in learning. There is a need to list and grade the elements of the reference skill. The most required reference skill to be taught at the beginner's level is
(1) Looking up a dictionary
(2) Consulting encyclopedia
(3) Comparing grammar book
(4) Reviewing the latest book

60. "Developing imagination is an important objective of language teaching". The text type that helps developing imagination is
(1) Biography
(2) Stories
(3) Recipe
(4) Report

www.prepp.in

Prepp
Your Personal Exams Guide

# KANNADA MEDIUM
## PART – III
## CHILD DEVELOPMENT AND PEDAGOGY

**61.** ತರಗತಿ ಶಿಕ್ಷಕರಿಗೆ ಮಕ್ಕಳ ಬೆಳವಣಿಗೆ ಮತ್ತು ವಿಕಾಸದ ಜ್ಞಾನವು

(1) ಮನಃಶಾಸ್ತ್ರದ ಜ್ಞಾನವನ್ನು ಸಮೃದ್ಧಗೊಳಿಸಿಕೊಳ್ಳಲು ಸಹಾಯ ಮಾಡುತ್ತದೆ

(2) ಶಾಲಾ ಸನ್ನಿವೇಶವನ್ನು ಉತ್ತಮಪಡಿಸಲು ಸಹಾಯ ಮಾಡುತ್ತದೆ

(3) ಮಕ್ಕಳ ಬೆಳವಣಿಗೆ ಮತ್ತು ವಿಕಾಸದ ವಿವಿಧ ಅಂಶಗಳನ್ನು ಮಾಪನ ಮಾಡಲು ಸಹಾಯ ಮಾಡುತ್ತದೆ

(4) ಮಕ್ಕಳ ಸಾಮರ್ಥ್ಯ ಮತ್ತು ನಿರೀಕ್ಷೆಗಳನ್ನು ಸೂಕ್ತವಾಗಿ ಅರ್ಥೈಸಿಕೊಳ್ಳಲು ಸಹಾಯ ಮಾಡುತ್ತದೆ

**62.** ಮಗುವಿನ ವಿಕಾಸವನ್ನು ಪ್ರಭಾವಿಸದ ಒಂದು ಅಂಶ

(1) ಅನುವಂಶೀಯತೆ (2) ಪರಿಸರ

(3) ಬೆಳವಣಿಗೆ (4) ಸಾಧನೆ

**63.** ಸಾಮಾಜೀಕರಣದ ಒಂದು ಅಂಗವಾಗಿ ಶಾಲೆಯು

(1) ವಿದ್ಯಾರ್ಥಿಗಳಿಗೆ ಜೀವನ ಕೌಶಲಗಳನ್ನು ಬೋಧಿಸುತ್ತದೆ

(2) ವಿಷಯ ಜ್ಞಾನವನ್ನು ವರ್ಗಾಯಿಸಲು ಸಹಾಯ ಮಾಡುತ್ತದೆ

(3) ಅಂತರಕ್ರಿಯೆಗಳ ಮೂಲಕ ಸಾಮಾಜಿಕ ಕೌಶಲಗಳನ್ನು ಒದಗಿಸುತ್ತದೆ

(4) ವಿದ್ಯಾರ್ಥಿಗಳನ್ನು ಉತ್ತಮ ಕಲಿಕಾರ್ಥಿಗಳನ್ನಾಗಿ ಮಾಡಲು ಸಹಾಯ ಮಾಡುತ್ತದೆ

**64.** ಮಗುವಿನ ಸಾಮಾಜಿಕ ಬೆಳವಣಿಗೆಯ ಒಂದು ಸೂಚಕ

(1) ಕುಟುಂಬದ ಗುಂಪಿನಿಂದ ಬೇರ್ಪಡೆಗೊಂಡು ಸಮವಯಸ್ಕರ ಗುಂಪಿನ ಕ್ರಿಯಾಶೀಲ ಸದಸ್ಯನಾಗುವುದು

(2) ಎಲ್ಲಾ ಶಾಲಾ ವಿಷಯಗಳ ಕಲಿಕೆಯಲ್ಲಿ ಆಸಕ್ತಿ ಮತ್ತು ಕಾಳಜಿ ತೋರುವುದು

(3) ತಾರ್ಕಿಕವಾಗಿ ಮತ್ತು ಬೌದ್ಧಿಕವಾಗಿ ಆಲೋಚಿಸುವ ಸಾಮರ್ಥ್ಯ

(4) ಆಸಕ್ತಿಯ ಒಂದು ವಿಷಯವನ್ನು ಕಲಿಯುವಲ್ಲಿ ವಿಸ್ತರಿಸಲ್ಪಟ್ಟ ಅವಧಾನದ ವ್ಯಾಪ್ತಿ

**65.** ಕಲಿಕೆಯ ಮೌಲ್ಯಮಾಪನದಲ್ಲಿ (assessment of learning) ಮುಖ್ಯ ಕೇಂದ್ರಿತ ಅಂಶ

(1) ಕಲಿಕೆಯ ಕೌಶಲಗಳನ್ನು ಬೆಳೆಸುವುದು

(2) ಕಲಿವಿನ ಫಲಗಳಲ್ಲಿನ ಸಾಧನೆಯನ್ನು ಕಂಡುಕೊಳ್ಳುವುದು

(3) ವಿದ್ಯಾರ್ಥಿಗಳನ್ನು ಆಗಾಗ್ಗೆ ಮೌಲ್ಯಾಂಕನ ಮಾಡುವುದು

(4) ಓದಿನ ಹವ್ಯಾಸಗಳನ್ನು ಬೆಳೆಸುವುದು

www.prepp.in

Prepp
Your Personal Exams Guide

66. ವೈಗೊಟ್ಸ್ಕಿ ಅವರ ಪ್ರಕಾರ ಕಲಿಕೆಯು ಒಳಗೊಳ್ಳುವ ಒಂದು ಅಂಶ

(1) ಸಂವಹನವನ್ನು ಒಳಗೊಳ್ಳುವ ಸಾಮಾಜಿಕ ಅಂತರಕ್ರಿಯೆಗಳು

(2) ಮಕ್ಕಳ ವಿಕಾಸದೊಂದಿಗೆ ಮುಂದುವರಿಯುವ ಜ್ಞಾನಾತ್ಮಕ ವಿಕಾಸ

(3) ಪ್ರಯೋಗದ ಮೂಲಕ ಸಂಶೋಧನೆ

(4) ಬೌದ್ಧಿಕ ವಿಕಾಸದ ಪ್ರಕ್ರಿಯೆಗಳು

67. ಪ್ರಗತಿಶೀಲ ಶಿಕ್ಷಣದ ಒಂದು ಪ್ರಮುಖ ಪರಿಕಲ್ಪನೆ

(1) ಶಿಕ್ಷಣ ಮತ್ತು ಮೌಲ್ಯಮಾಪನದಲ್ಲಿ ಶಿಕ್ಷಕನೇ ಪ್ರಧಾನ

(2) ಪ್ರತಿ ಮಗುವೂ ಕಲಿಕೆಯ ಸಾಮರ್ಥ್ಯಗಳನ್ನು ಹೊಂದಿದೆ ಎಂಬ ಕಲ್ಪನೆ

(3) ವಿಷಯ ಕೇಂದ್ರಿತ ಕಲಿಕೆಗೆ ಅವಕಾಶ

(4) ಅಭಿಪ್ರೇರಣೆಯ ವಿಕಾಸ ಮತ್ತು ಪ್ರತಿ ಮಗುವಿನ ಮೌಲ್ಯಾಂಕನ

68. ಶಿಕ್ಷಕರಿಗೆ ಬಹು ಆಯಾಮದ ಬುದ್ಧಿಶಕ್ತಿ ಕಲ್ಪನೆಯ ಒಂದು ಮುಖ್ಯವಾದ ಉಪಯೋಗ

(1) ಮಕ್ಕಳು ಹೇಗೆ ಕಲಿಯ ಬಯಸುತ್ತಾರೆ ಹಾಗೂ ಮಾಹಿತಿಯನ್ನು ಸಂಸ್ಕರಿಸುತ್ತಾರೆ ಎಂಬುದನ್ನು ತಿಳಿಯುವುದು

(2) ಪ್ರತಿ ಮಗುವಿನ ವ್ಯಕ್ತಿತ್ವ ವಿಕಸನವನ್ನು ಮೌಲ್ಯಾಂಕನ ಮಾಡುವುದು

(3) ಮಕ್ಕಳ ಶೈಕ್ಷಣಿಕ ಕಾರ್ಯನಿರ್ವಹಣೆಯನ್ನು ಮೌಲ್ಯಮಾಪನ ಮಾಡುವುದು

(4) ತಮ್ಮ ಸುಗಮಗಾರಿಕೆ ಪ್ರಕ್ರಿಯೆಗಳನ್ನು ಯೋಜಿಸುವುದು

69. ಮಕ್ಕಳಲ್ಲಿನ ಜ್ಞಾನಾತ್ಮಕ ಕೌಶಲಗಳಲ್ಲಿನ ವ್ಯಕ್ತಿ ಭಿನ್ನತೆಗೆ ಒಂದು ಉದಾಹರಣೆ

(1) ಒಂದು ದೈಹಿಕ ಕಾರ್ಯವನ್ನು ಮಾಡುವುದು

(2) ಕೋಪವನ್ನು ವ್ಯಕ್ತಪಡಿಸುವುದು

(3) ಮೋಟರ್ ಸೈಕಲ್ ಚಲಾಯಿಸುವುದು

(4) ಕಲಿಕೆಯ ವೇಗ

70. ತರಗತಿಗಳಲ್ಲಿ ಲಿಂಗ ತಾರತಮ್ಯದ ಒಂದು ಪರಿಣಾಮ

(1) ಅದು ವಿದ್ಯಾರ್ಥಿಗಳಲ್ಲಿ ಸ್ಪರ್ಧೆಯನ್ನು ಬೆಳೆಸುತ್ತದೆ

(2) ಹುಡುಗರು ಮತ್ತು ಹುಡುಗಿಯರಿಗೆ ವಿಭಿನ್ನ ಅವಕಾಶಗಳನ್ನು ಸೃಷ್ಟಿಸುತ್ತದೆ

(3) ಪರಿಪೂರ್ಣ ವಿಕಾಸ ಮತ್ತು ಕಲಿಕೆಯನ್ನು ಮಿತಿಗೊಳಿಸುತ್ತದೆ

(4) ಕಲಿಕೆಯನ್ನು ಉತ್ತೇಜಿಸುತ್ತದೆ

www.prepp.in

71. ಸಾಮಾಜಿಕ ರಚನೆಯಾಗಿ ಲಿಂಗ ಭೇದಕ್ಕೆ ಒಂದು ಉದಾಹರಣೆ

(1) ಹೆಣ್ಣು ಮಕ್ಕಳು ಆರಂಭದಲ್ಲಿ ಭಾಗವಹಿಸಲು ಸ್ವಲ್ಪ ಸಮಯ ತೆಗೆದುಕೊಳ್ಳುವುದು ಮತ್ತು ತರಗತಿ ಚಟುವಟಿಕೆಗಳಲ್ಲಿ ಭಾಗವಹಿಸುವುದು

(2) ಹೆಣ್ಣು ಮಕ್ಕಳನ್ನು ಉನ್ನತ ಶಿಕ್ಷಣಕ್ಕೆ ಕಳುಹಿಸಲು ಪೋಷಕರ ಹಿಂಜರಿಕೆ

(3) ಹೆಣ್ಣು ಮಕ್ಕಳ ಉತ್ತಮ ಕಾರ್ಯನಿರ್ವಹಣೆ

(4) ಗಂಡು ಮಕ್ಕಳು ಹೆಚ್ಚಿನ ದೈಹಿಕ ಕಾರ್ಯಗಳನ್ನು ಮಾಡುವುದು

72. ಒಬ್ಬ ಶಿಕ್ಷಕರು ಶಾಲಾ ಆಧಾರಿತ ಮೌಲ್ಯಾಂಕನವನ್ನು ಅನುಸರಿಸಲು ಅಪೇಕ್ಷಿಸುತ್ತಾರೆ, ಇದರಿಂದ ಅವನು/ಅವಳು

(1) ಮೌಲ್ಯಾಂಕನವನ್ನು ಸಮಗ್ರವಾಗಿ ಮಾಡಬಹುದು

(2) ವಿದ್ಯಾರ್ಥಿಗಳ ಮೌಲ್ಯಾಂಕನವನ್ನು ಸುಲಭವಾಗಿ ಮಾಡಬಹುದು

(3) ವಿದ್ಯಾರ್ಥಿಗಳನ್ನು ತೇರ್ಗಡೆಗೊಳಿಸಬಹುದು

(4) ಅವನ/ಅವಳ ತರಗತಿಯಲ್ಲಿನ ಬೋಧನೆಯ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಬಹುದು

73. ಒಂದು ಸಮಸ್ಯೆಯನ್ನು ಪರಿಹರಿಸುವಾಗ ಮಗು ಆಲೋಚಿಸಲು ಆರಂಭಿಸುತ್ತದೆ. ಇದರ ಫಲಿತವಾಗಿ ಮಗು

(1) ಮಗು ಭ್ರಮೆಯನ್ನು ಮೂಡಿಸಿಕೊಳ್ಳುತ್ತದೆ

(2) ಮಗು ಮಾನಸಿಕವಾಗಿ ಪರಿಹಾರವನ್ನು ಪಡೆದುಕೊಳ್ಳುತ್ತದೆ

(3) ಮಗು ಅನುಬಂಧಿತವಾಗಿ ಕಲಿಯುತ್ತದೆ (the child learns by conditioning)

(4) ಮಗು ಚುರುಕಾಗುತ್ತದೆ

74. ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನವು ಒತ್ತು ನೀಡುವ ಅಂಶ

(1) ವಿದ್ಯಾರ್ಥಿಗಳ ಆಲೋಚನಾ ಪ್ರಕ್ರಿಯೆಗಳು ಮತ್ತು ಕಂಠಪಾಠಕ್ಕೆ ನಿರುತ್ತೇಜನ

(2) ಆಗಾಗ್ಗೆ ಕಿರು ಪರೀಕ್ಷೆಗಳು ಮತ್ತು ಪರೀಕ್ಷೆಗಳನ್ನು ನಡೆಸುವುದು

(3) ಮೌಲ್ಯಮಾಪನ ಮಾಡುವುದಕ್ಕೆ ಮುಂಚಿತವಾಗಿ ಪಠ್ಯ ವಸ್ತುವನ್ನು ಪೂರ್ಣಗೊಳಿಸುವುದು

(4) ಪ್ರತಿ ವಿಷಯವನ್ನು ಪೂರ್ಣಗೊಳಿಸಿದ ನಂತರ ವಿದ್ಯಾರ್ಥಿಗಳ ಸಾಧನೆ

75. ವಿದ್ಯಾರ್ಥಿಗಳ ಮೌಲ್ಯಾಂಕನವನ್ನು ಮಾಡಲು ಪರಿಗಣಿಸುವ ಒಂದು ಪ್ರಮುಖ ಅಂಶ

(1) ನಿಗದಿತ ಪಠ್ಯ ವಿಷಯಗಳು

(2) ಕಲಿವಿನ ಫಲಗಳು

(3) ತರಗತಿಗಳಲ್ಲಿ ಒದಗಿಸಿದ ಕಲಿವಿನ ಅನುಭವಗಳು

(4) ಶಾಲಾ ವಿಷಯಗಳಲ್ಲಿ ವಿದ್ಯಾರ್ಥಿಗಳ ಕಾರ್ಯನಿರ್ವಹಣೆ

Prepp
Your Personal Exams Guide

76. ವೈವಿಧ್ಯಮಯ ವಿದ್ಯಾರ್ಥಿಗಳಿರುವ ಒಳಗೊಳ್ಳುವ ತರಗತಿಯಲ್ಲಿ ಸಹಕಾರಿ ಕಲಿವು ಮತ್ತು ಸಮವರ್ತಿ ಕಲಿಕೆಯು/ನ್ನು
   (1) ಸಹಪಾಠಿಗಳೊಂದಿಗೆ ಹೋಲಿಸಿಕೊಳ್ಳುವುದನ್ನು ಕೆಲವೊಮ್ಮೆ ಉತ್ತೇಜಿಸುತ್ತದೆ
   (2) ಮಕ್ಕಳಲ್ಲಿನ ಸ್ಪರ್ಧೆಯನ್ನು ಸಕ್ರಿಯವಾಗಿ ನಿರುತ್ತೇಜಿಸುತ್ತದೆ
   (3) ಸಹಪಾಠಿಗಳ ಸ್ವೀಕಾರಾರ್ಹತೆಯ ಸುಲಭೀಕರಣವನ್ನು ಸಕ್ರಿಯವಾಗಿ ಉತ್ತೇಜಿಸುತ್ತದೆ
   (4) ಅಭ್ಯಾಸ ಮಾಡಬಾರದು ಮತ್ತು ವಿದ್ಯಾರ್ಥಿಗಳನ್ನು ಅವರ ಸಾಮರ್ಥ್ಯ ಆಧರಿಸಿ ವಿಂಗಡಿಸಬೇಕು

77. ಒಳಗೊಳ್ಳುವ ಶಿಕ್ಷಣದ ಪರಿಕಲ್ಪನೆಯು
   (1) ವಿಶೇಷ ಶಾಲೆಗಳು ಅಥವಾ ತರಗತಿಗಳ ಬಳಕೆಯನ್ನು ಒಪ್ಪಿಕೊಳ್ಳುತ್ತದೆ
   (2) ಆಗಾಗ್ಗೆ ಕಿರು ಪರೀಕ್ಷೆಗಳು ಮತ್ತು ಪರೀಕ್ಷೆಗಳನ್ನು ನಡೆಸುತ್ತದೆ
   (3) ವಿಶೇಷ ಅಗತ್ಯತೆಯುಳ್ಳ ಮಕ್ಕಳನ್ನು ಇತರೆ ಮಕ್ಕಳಿಂದ ತರಗತಿಗಳಲ್ಲಿ ಬೇರ್ಪಡಿಸುವುದನ್ನು ಅನುಮತಿಸುತ್ತದೆ
   (4) ವಿಶೇಷ ಶಾಲೆಗಳು ಅಥವಾ ತರಗತಿಗಳ ಬಳಕೆಯನ್ನು ನಿರಾಕರಿಸುತ್ತದೆ

78. ತನ್ನ ವಿದ್ಯಾರ್ಥಿಗಳಲ್ಲಿ ಆಸಕ್ತಿಯನ್ನು ಮೂಡಿಸುವ ಕ್ರಿಯಾತ್ಮಕ ಪದ್ಧತಿಗಳನ್ನು ಸಂಶೋಧಿಸುವ ಮತ್ತು ಅನ್ವಯಿಸುವ ಸಾಮರ್ಥ್ಯ ಒಬ್ಬ ಶಿಕ್ಷಕರಿಗೆ ಇದೆ. ಇದು ಸೂಚಿಸುವುದು ಅವರ
   (1) ಬುದ್ಧಿಶಕ್ತಿ
   (2) ಕ್ರಿಯಾಶೀಲತೆ
   (3) ಆಲೋಚನೆ
   (4) ಅಭಿಕ್ಷಮತೆ

79. ಇವುಗಳಲ್ಲಿ ಯಾವುದು ಡಿಸ್ಲೆಕ್ಸಿಯಾದ ಒಂದು ಲಕ್ಷಣವಲ್ಲ?
   (1) ಎಡಗೈ ಅಥವಾ ಬಲಗೈ ಬಳಕೆ
   (2) ನಿಖರವಾಗಿ ಓದುವುದು, ವೇಗ ಮತ್ತು ಗ್ರಹಿಕೆಯಲ್ಲಿ ಸಮಸ್ಯೆಗಳು
   (3) ನಿಧಾನವಾಗಿ ಬರೆಯುವುದು
   (4) ಪದಗಳನ್ನು ಸ್ಮರಣೆಗೆ ತಂದುಕೊಳ್ಳುವಲ್ಲಿನ ಕಠಿಣತೆ

80. ಸ್ವತಂತ್ರವಾಗಿ ಆಲೋಚಿಸುವುದನ್ನು ಉತ್ತೇಜಿಸಲು ಮತ್ತು ಮಕ್ಕಳನ್ನು ಪರಿಣಾಮಕಾರಿ ಕಲಿಕಾರ್ಥಿಗಳನ್ನಾಗಿ ಮಾಡಲು ಶಿಕ್ಷಕರು
   (1) ಪ್ರತಿ ಸಾಧನೆಗೆ ಮಕ್ಕಳಿಗೆ ಬಹುಮಾನವನ್ನು ನೀಡಬೇಕು
   (2) ವಿವಿಧ ಕಲಿವಿನ ವಸ್ತುಗಳನ್ನು ಉಪಯೋಗಿಸಿಕೊಂಡು ವಿದ್ಯಾರ್ಥಿಗಳಿಗೆ ಉತ್ತಮವಾಗಿ ಬೋಧಿಸಬೇಕು
   (3) ಕಲಿಕೆಯ ಮಾಹಿತಿಯನ್ನು ಸಣ್ಣ ಘಟಕಗಳಾಗಿ ಅಥವಾ ತುಣುಕುಗಳಾಗಿ ಒದಗಿಸಬೇಕು
   (4) ಸ್ಮರಿಸಲು ಸುಲಭವಾಗುವಂತೆ ಮಾಹಿತಿಯನ್ನು ವ್ಯವಸ್ಥಿತವಾಗಿ ಒದಗಿಸಬೇಕು

Prepp
Your Personal Exams Guide

81. ವಿದ್ಯಾರ್ಥಿಗಳಲ್ಲಿ ಕಲಿಕೆಯ ವಿಫಲತೆಗೆ ಕಾರಣವಾಗುವ ಒಂದು ಅಂಶ
(1) ಶಾಲಾ ಸೌಲಭ್ಯಗಳ ಕೊರತೆ
(2) ಅಭಿಪ್ರೇರಣೆಯ ಕೊರತೆ
(3) ಶಿಕ್ಷಕರ ಒತ್ತಡ
(4) ಶಾಲಾ ಪಠ್ಯಕ್ರಮ

82. ಕಲಿಕೆಗೆ ಅಗತ್ಯವಾದ ಆಂತರಿಕ ಮೂಲಭೂತ ಅಂಶ
(1) ಸಿದ್ಧತೆ
(2) ಪರಿಪಕ್ವತೆ
(3) ದೈಹಿಕ ಬೆಳವಣಿಗೆ
(4) ಮನೋಧೋರಣೆ

83. ಸಮಸ್ಯಾ ಪರಿಹಾರ ಕೌಶಲಗಳನ್ನು ವಿದ್ಯಾರ್ಥಿಗಳು ರೂಢಿಸಿಕೊಳ್ಳಲು ಶಿಕ್ಷಕರು ಒದಗಿಸುವ ಚಟುವಟಿಕೆಗಳು
(1) ನಿಖರತೆ ಮತ್ತು ಸ್ಪಷ್ಟತೆಯನ್ನು ಒಳಗೊಂಡಿರಬೇಕು
(2) ಕಂಠಪಾಠ ಮಾಡುವಂತೆ ಮತ್ತು ಗ್ರಹಿಸುವಂತೆ ಇರಬೇಕು
(3) ಅಭ್ಯಾಸ ಮತ್ತು ಆಗಾಗ್ಗೆ ರೂಢಿಸಿಕೊಳ್ಳುವಂತೆ ಇರಬೇಕು
(4) ವಿಚಾರಣೆ, ಕಾರಣೀಕರಿಸುವುದು ಮತ್ತು ನಿರ್ಧಾರಗಳನ್ನು ಕೈಗೊಳ್ಳುವಂತೆ ಇರಬೇಕು

84. ಓದಲು ಕಲಿಯುವುದು ಇದರಲ್ಲಿನ ಜ್ಞಾನಾತ್ಮಕ ಕೌಶಲ
(1) ಮಾನಸಿಕ ಪ್ರವೃತ್ತಿ
(2) ಆಲೋಚಿಸುವ ಸಾಮರ್ಥ್ಯ
(3) ಮಾತನಾಡುವ ಭಾಷೆ
(4) ಭಾವನಾಶಕ್ತಿ

85. ಮಗುವಿನ ಸಮಸ್ಯಾ ಪರಿಹಾರ ವರ್ತನೆ ವ್ಯಕ್ತವಾಗುವುದು
(1) ಆಲೋಚನೆ ಮತ್ತು ಕಾರಣೀಕರಿಸುವ ಶಕ್ತಿಯಿಂದ
(2) ಜ್ಞಾನದ ವಿವಿಧ ಮೂಲಗಳನ್ನು ಪರಾಮರ್ಶಿಸುವುದರಿಂದ
(3) ಯತ್ನ ಮತ್ತು ದೋಷ ವಿಧಾನದ ಪ್ರಯೋಗಗಳ ಮೂಲಕ
(4) ನಂಬಿಕಸ್ಥ ಶಿಕ್ಷಕರ ಸಹಾಯವನ್ನು ಪಡೆಯುವುದರಿಂದ

www.prepp.in

Prepp
Your Personal Exams Guide

86. ತಾವೇ ಸ್ವತಃ ಕಲಿಯಲು ಮಕ್ಕಳು ಬಳಸುವ ಒಂದು ಮಾರ್ಗೋಪಾಯ
(1) ಮೂರ್ತ ವಸ್ತುಗಳನ್ನು ಗ್ರಹಿಸುವುದು ಮತ್ತು ಸಂವೇದನಾ ಜ್ಞಾನವನ್ನು ಪಡೆದುಕೊಳ್ಳುವುದು *
(2) ಶಿಕ್ಷಕರು ಸೂಚಿಸಿದ ಪುಸ್ತಕಗಳನ್ನು ಓದುವುದು
(3) ತರಗತಿಗಳಲ್ಲಿ ಅವಧಾನದಿಂದ ಕಲಿಯುವುದು
(4) ಶಿಕ್ಷಕರು ಒದಗಿಸಿದ ಜ್ಞಾನವನ್ನು ಗ್ರಹಿಸುವುದು

87. ಸಂವೇದನೆ (emotion) ಯನ್ನು ವಿವರಿಸುವ ಒಂದು ಅಂಶ
(1) ಮಗುವಿನಲ್ಲಿನ ಒಂದು ಸಾಮಾನ್ಯ ಭಾವನೆಯನ್ನು ಮಾನಸಿಕವಾಗಿ ವ್ಯಕ್ತಪಡಿಸುವುದು *
(2) ಕ್ರಿಯೆಯಲ್ಲಿ ತೊಡಗಿಸಿಕೊಳ್ಳುವಂತೆ ಮಾಡುವ ಒಂದು ಬಾಹ್ಯ ಪ್ರಚೋದನೆಗೆ ಪ್ರತಿಕ್ರಿಯೆ
(3) ತಾರ್ಕಿಕ ಆಲೋಚನೆ
(4) ಯಾವುದೇ ಪ್ರತಿಕ್ರಿಯೆಗಳನ್ನು ನೀಡದೆ ಶಾಂತವಾಗಿರುವುದು

88. ಮಗು ಒಂದು ವಿಷಯವನ್ನು ಕಲಿಯುವುದರಲ್ಲಿ ಸಂತೋಷವನ್ನು ಅನುಭವಿಸಿ, ಅದರಲ್ಲಿ ತೊಡಗಿಸಿಕೊಳ್ಳುತ್ತದೆ. ಇದು
(1) ಪ್ರೋತ್ಸಾಹಕವನ್ನು ಸೂಚಿಸುತ್ತದೆ
(2) ಬಲವನ್ನು ಸೂಚಿಸುತ್ತದೆ
(3) ಆಂತರಿಕ ಅಭಿಪ್ರೇರಣೆಯನ್ನು ಸೂಚಿಸುತ್ತದೆ
(4) ಬಾಹ್ಯ ಅಭಿಪ್ರೇರಣೆಯನ್ನು ಸೂಚಿಸುತ್ತದೆ

89. ಕಲಿಕೆಯ ಮೇಲೆ ವರ್ತನೆಯ ಪ್ರಭಾವ
(1) ಅದು ಪ್ರಚೋದನೆ ಮತ್ತು ಪ್ರತಿಕ್ರಿಯೆಗಳನ್ನು ಬದಲಾಯಿಸುತ್ತದೆ
(2) ಅದು ಕಲಿಕಾರ್ಥಿಗಳನ್ನು ನಿರ್ದಿಷ್ಟ ಗುರಿಗಳೆಡೆಗೆ ನಿರ್ದೇಶಿಸುತ್ತದೆ
(3) ಬಹು ಕಾರ್ಯಗಳನ್ನು ನೀಡುತ್ತದೆ
(4) ಓದುವ ಹವ್ಯಾಸಗಳನ್ನು ಬೆಳೆಸುತ್ತದೆ

90. ಕಲಿಕೆಯನ್ನು ಪ್ರಭಾವಿಸುವ ಪ್ರಕ್ರಿಯಾ ಆಧಾರಿತ ಒಂದು ಅಂಶ
(1) ಕಲಿಕಾರ್ಥಿಯ ಮೂಲ ಸಾಮರ್ಥ್ಯ
(2) ವಸ್ತು ವಿಷಯದ ಮೇಲಿನ ಪ್ರಭುತ್ವ
(3) ವಿಷಯದ ಸ್ವಭಾವ ಮತ್ತು ಕಲಿವಿನ ಅನುಭವಗಳು
(4) ಹೊಸ ಕಲಿಕೆಯನ್ನು ಹಿಂದಿನ ಕಲಿಕೆಯೊಂದಿಗೆ ಸಂಬಂಧಿಸುವುದು

www.prepp.in

# KANNADA MEDIUM
## PART – IV
## SOCIAL SCIENCE

91. 'ದಿ ಏಷ್ಯಾಟಿಕ್ ಸೊಸೈಟಿ' ಎಂಬ ಸಂಸ್ಥೆಯನ್ನು ಸ್ಥಾಪಿಸಿದವರು
(1) ಮ್ಯಾಕ್ಸ್‌ಮುಲ್ಲರ್
(2) ವಿಲಿಯಂ ಜೋನ್ಸ್
(3) ಅಬೆ ಡುಬಾಯ್ಸ್
(4) ಕೋಲ್ ಬ್ರೂಕ್

92. ಜಗತ್ತಿನ ಮೊಟ್ಟಮೊದಲ 'ಸಾಮ್ರಾಜ್ಞಿ'
(1) ಹ್ಯಾಷೆಪ್‌ಸುಟ್
(2) ಅಮೇನ್‌ಹೋಟೆಪ್
(3) ಥಟ್ಮೋಸ್
(4) ಕ್ಲಿಯೋಪಾತ್ರ

93. 'ಅಮುಕ್ತ ಮಾಲ್ಯದ' ಎಂಬ ಕೃತಿಯನ್ನು ರಚಿಸಿದವರು
(1) ಪ್ರೌಢದೇವರಾಯ
(2) ನಂದಿ ತಿಮ್ಮಣ್ಣ
(3) ಕೃಷ್ಣದೇವರಾಯ
(4) ತೆನಾಲಿ ರಾಮಕೃಷ್ಣ

94. ಇರ್ವಿನ್ ಕಾಲುವೆಯನ್ನು ನಿರ್ಮಾಣ ಮಾಡಿಸಿದ ದಿವಾನರು
(1) ಸರ್ ಎಂ. ವಿಶ್ವೇಶ್ವರಯ್ಯ
(2) ನಾಲ್ವಡಿ ಕೃಷ್ಣರಾಜ ಒಡೆಯರು
(3) ಹತ್ತನೆಯ ಚಾಮರಾಜ ಒಡೆಯರು
(4) ಸರ್ ಮಿರ್ಜಾ ಇಸ್ಮಾಯಿಲ್

95. ವರ್ಧಮಾನ ಮಹಾವೀರನು ಜನಿಸಿದ ಸ್ಥಳ
(1) ಸಾರನಾಥ (2) ಕುಂಡಲಗ್ರಾಮ (3) ಪಾವಾಪುರಿ (4) ಕುಶಿನಗರ

96. 'ವಾತಾಪಿಕೊಂಡ' ಎಂಬ ಬಿರುದು ಪಡೆದ ಪಲ್ಲವರ ರಾಜ
(1) ಶಿವಸ್ಕಂದ ವರ್ಮ
(2) ಮಹೇಂದ್ರ ವರ್ಮ
(3) ಅಪರಾಜಿತ ಪಲ್ಲವ
(4) ಪ್ರಥಮ ನರಸಿಂಹವರ್ಮ

97. ಅಲ್ಲಾವುದ್ದೀನ್ ಖಿಲ್ಜಿಯ ಪ್ರಮುಖ ದಂಡನಾಯಕ
(1) ಘಾಜಿ ಮಲಿಕ್
(2) ಜಲಾಲುದ್ದೀನ್
(3) ಮಲ್ಲಿಕ್ ಕಾಫರ್
(4) ಕುತ್ಬುದ್ದೀನ್ ಮುಬಾರಕ್

www.prepp.in

98. "ಜಗತ್ತು ಮಾಯೆ, ಬ್ರಹ್ಮ ಮಾತ್ರ ಸತ್ಯ" ಎಂದು ಪ್ರತಿಪಾದಿಸಿದವರು

(1) ರಾಮಾನುಜಾಚಾರ್ಯರು
(2) ಮಧ್ವಾಚಾರ್ಯರು
(3) ಶಂಕರಾಚಾರ್ಯರು
(4) ಬಸವೇಶ್ವರರು

99. 'ದಾಮ್' ಎಂಬ ಹೊಸ ಬೆಳ್ಳಿಯ ನಾಣ್ಯವನ್ನು ಚಲಾವಣೆಗೆ ತಂದವನು

(1) ಔರಂಗಜೇಬ
(2) ಷಹಜಹಾನ್
(3) ಅಕ್ಬರ್
(4) ಷೇರ್‌ಷಾಹ

100. ಎರಡನೆಯ ಶಿವಾಜಿ ಎಂದು ಪ್ರಸಿದ್ಧನಾಗಿದ್ದ ಪೇಶ್ವೆ

(1) ಒಂದನೆಯ ಬಾಜೀರಾವ್
(2) ಬಾಲಾಜಿ ಬಾಜೀರಾವ್
(3) ಒಂದನೆಯ ಮಾಧವರಾವ್
(4) ಬಾಲಾಜಿ ವಿಶ್ವನಾಥ

101. 'ನೀಲಿ ನೀರಿನ ನೀತಿ'ಯನ್ನು ಜಾರಿಗೆ ತಂದವನು

(1) ವಾಸ್ಕೋಡಗಾಮ
(2) ಆಲ್ಫೋನ್ಸೊ ಡಿ ಅಲ್ಬುಕರ್ಕ್
(3) ರಾಬರ್ಟ್ ಕ್ಲೈವ್
(4) ಫ್ರಾನ್ಸಿಸ್ಕೊ ಡಿ ಆಲ್ಮೇಡ

102. ಪ್ಲಾಸಿ ಕದನ ನಡೆದ ವರ್ಷ

(1) 1764
(2) 1757
(3) 1857
(4) 1761

103. ಅಲೆಗ್ಸಾಂಡರ್ ರೀಡ್ ಜಾರಿಗೆ ತಂದ ಕಂದಾಯ ಪದ್ಧತಿ

(1) ದಿವಾನಿ ಹಕ್ಕು ಪದ್ಧತಿ
(2) ಖಾಯಂ ಜಮೀನ್ದಾರಿ ಪದ್ಧತಿ
(3) ಮಹಲ್ವಾರಿ ಪದ್ಧತಿ
(4) ರೈತವಾರಿ ಪದ್ಧತಿ

104. ಪ್ರಾರ್ಥನಾ ಸಮಾಜದ ಸ್ಥಾಪಕರು

(1) ಡಾ|| ಆತ್ಮಾರಾಮ್ ಪಾಂಡುರಂಗ
(2) ದಯಾನಂದ ಸರಸ್ವತಿ
(3) ರಾಜಾರಾಮ್ ಮೋಹನ್‌ರಾಯ್
(4) ಮಹಾತ್ಮ ಜ್ಯೋತಿಭಾ ಪುಲೆ

www.prepp.in

Prepp
Your Personal Exams Guide

105. ರಾಜ್ಯಶಾಸ್ತ್ರದ ಪಿತಾಮಹ

(1) ಸಾಕ್ರೆಟೀಸ್
(2) ಪ್ಲೇಟೋ
(3) ಅರಿಸ್ಟಾಟಲ್
(4) ಆ್ಯಡಂ ಸ್ಮಿತ್

106. ಸಾರ್ವಜನಿಕ ಆಡಳಿತದ ವ್ಯಾಪ್ತಿಯನ್ನು 'ಪೋಸ್ಡ್‌ಕಾರ್ಬ್' ಎಂಬ ಇಂಗ್ಲಿಷ್ ಪದದ ಮೂಲಕ ವಿವರಿಸಿದವರು

(1) ಎಲ್. ಡಿ. ವೈಟ್
(2) ವುಡ್ರೋ ವಿಲ್ಸನ್
(3) ಸೈಮನ್
(4) ಲೂಥರ್ ಗುಲಿಕ್

107. 'ಜಾತ್ಯತೀತ' ಎಂಬ ಪದವನ್ನು ಅಳವಡಿಸಿದ ಸಂವಿಧಾನದ ತಿದ್ದುಪಡಿ

(1) 51ನೇ ತಿದ್ದುಪಡಿ
(2) 42ನೇ ತಿದ್ದುಪಡಿ
(3) 71ನೇ ತಿದ್ದುಪಡಿ
(4) 53ನೇ ತಿದ್ದುಪಡಿ

108. ಡಾ॥ ಬಿ. ಆರ್. ಅಂಬೇಡ್ಕರ್ ಅವರು 'ಸಂವಿಧಾನದ ಆತ್ಮ ಮತ್ತು ಹೃದಯ' ವಿದ್ದಂತೆ ಎಂದು ಕರೆದ ಮೂಲಭೂತ ಹಕ್ಕು

(1) ಸಂವಿಧಾನದ ಪರಿಹಾರದ ಹಕ್ಕು
(2) ಸ್ವಾತಂತ್ರ್ಯದ ಹಕ್ಕು
(3) ಶೋಷಣೆಯ ವಿರುದ್ಧದ ಹಕ್ಕು
(4) ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕುಗಳು

109. ಭಾರತದ ಪ್ರಥಮ ಮಹಿಳಾ ರಾಷ್ಟ್ರಪತಿ

(1) ಇಂದಿರಾಗಾಂಧಿ
(2) ಸರೋಜಿನಿ ನಾಯ್ಡು
(3) ಸುಚೇತಾ ಕೃಪಲಾನಿ
(4) ಪ್ರತಿಭಾ ಸಿಂಗ್ ಪಾಟೀಲ್

110. 'ಪಂಚಶೀಲ ತತ್ವ'ಗಳಿಗೆ ಸಹಿ ಹಾಕಿದವರು

(1) ಜವಾಹರಲಾಲ್ ನೆಹರೂ ಮತ್ತು ಸನ್‌ಯತ್ ಸೇನ್
(2) ಜವಾಹರಲಾಲ್ ನೆಹರೂ ಮತ್ತು ಚೌ ಎನ್‌ಲಾಯ್
(3) ಲಾಲ್‌ಬಹದ್ದೂರ್ ಶಾಸ್ತ್ರಿ ಮತ್ತು ಚೌ ಎನ್‌ಲಾಯ್
(4) ಇಂದಿರಾಗಾಂಧಿ ಮತ್ತು ಮಾವೋತ್ಸೆ ತುಂಗ್

www.prepp.in

Prepp
Your Personal Exams Guide

111. ''ದಕ್ಷಿಣ ಭಾರತದ ಕೊಡವರ ಧರ್ಮ ಮತ್ತು ಸಮಾಜ'' ಎಂಬ ಪುಸ್ತಕವನ್ನು ಬರೆದವರು

(1) ಜಿ. ಎಸ್. ಘುರ್ಯೆ
(2) ಸಿ. ಪಾರ್ವತಮ್ಮ
(3) ಎ. ಆರ್. ದೇಸಾಯಿ
(4) ಎಂ. ಎನ್. ಶ್ರೀನಿವಾಸ್

112. ''ಸಮಾಜಶಾಸ್ತ್ರದ ಬೆಳವಣಿಗೆಯ ಪಿತಾಮಹ'' ಎಂದು ಕರೆದಿರುವುದು

(1) ಎಮಿಲಿ ಡರ್ಖೀಮ್
(2) ಕಾರ್ಲ್ ಮಾರ್ಕ್ಸ್
(3) ಆಗಸ್ಟ್ ಕಾಮ್ಟೆ
(4) ಮ್ಯಾಕ್ಸ್ ವೆಬರ್

113. ಲ್ಯಾಟಿನ್ ಭಾಷೆಯ 'ಫ್ಯಾಮುಲಸ್' ಎಂಬ ಪದದ ಅರ್ಥ

(1) ಸಮಾಜ
(2) ಆಳು
(3) ವಿವಾಹ
(4) ಪಾಲನೆ ಮತ್ತು ಪೋಷಣೆ

114. ಅಸ್ಪೃಶ್ಯತಾ ಆಚರಣೆಯನ್ನು ನಿಷೇಧಿಸಿರುವ ಸಂವಿಧಾನದ ವಿಧಿ

(1) 46ನೇ ವಿಧಿ
(2) 30ನೇ ವಿಧಿ
(3) 45ನೇ ವಿಧಿ
(4) 17ನೇ ವಿಧಿ

115. ''ನರ್ಮದಾ ಬಚಾವೋ'' ಆಂದೋಲನದ ನೇತೃತ್ವ ವಹಿಸಿದವರು

(1) ಸುಂದರ್‌ಲಾಲ್ ಬಹುಗುಣ
(2) ಶಿವರಾಮ ಕಾರಂತ
(3) ಮೇಧಾ ಪಾಟ್ಕರ್
(4) ಬಾಬಾ ಆಮ್ಟೆ

116. ಭಾರತದಲ್ಲಿ ರಾಷ್ಟ್ರೀಯ ಆದಾಯದ ಅಂದಾಜನ್ನು ಮಾಡುವ ಜವಾಬ್ದಾರಿ ಹೊಂದಿರುವ ಸಂಸ್ಥೆ

(1) ಕೇಂದ್ರೀಯ ಅಂಕಿ-ಸಂಖ್ಯಾ ಸಂಸ್ಥೆ
(2) ರಾಷ್ಟ್ರೀಯ ಹಣಕಾಸು ಆಯೋಗ
(3) ಯೋಜನಾ ಆಯೋಗ
(4) ಯೋಜನಾ ಮಂಡಳಿ

www.prepp.in

117. 2011ರ ಜನಗಣತಿಯ ಪ್ರಕಾರ ಭಾರತದ ಜನಸಾಂದ್ರತೆ ಪ್ರತಿ ಚ. ಕಿ.ಮೀ.ಗೆ

(1) 380 ಜನರು
(2) 382 ಜನರು
(3) 943 ಜನರು
(4) 945 ಜನರು

118. 'ಭಾರತದ ನೈಜ ಅಭಿವೃದ್ಧಿಯೆಂದರೆ, ಗ್ರಾಮಗಳ ಅಭಿವೃದ್ಧಿ' ಎಂದು ಹೇಳಿದವರು

(1) ಡಾ॥ ಬಿ. ಆರ್. ಅಂಬೇಡ್ಕರ್
(2) ರವೀಂದ್ರನಾಥ್ ಠಾಗೋರ್
(3) ರಾಜಾರಾಮ್ ಮೋಹನ್‌ರಾಯ್
(4) ಮಹಾತ್ಮ ಗಾಂಧೀಜಿ

119. ಭಾರತೀಯ ರಿಜರ್ವ್ ಬ್ಯಾಂಕ್ ಸ್ಥಾಪನೆಯಾದ ವರ್ಷ

(1) 1933
(2) 1934
(3) 1935
(4) 1949

120. ವಿಶ್ವ ಗ್ರಾಹಕ ದಿನಾಚರಣೆಯನ್ನು ಪ್ರತಿವರ್ಷ ಆಚರಿಸುವುದು

(1) 15 ನೇ ಮಾರ್ಚ್
(2) 14 ನೇ ಮಾರ್ಚ್
(3) 14 ನೇ ನವಂಬರ್
(4) 02 ನೇ ಅಕ್ಟೋಬರ್

121. "ಬಿಳಿ ಕ್ರಾಂತಿಯ ಪಿತಾಮಹ" ಎಂದು ಪ್ರಸಿದ್ಧರಾದ ವ್ಯಕ್ತಿ

(1) ವರ್ಗೀಸ್ ಕುರಿಯನ್
(2) ಅಜೀಂ ಪ್ರೇಮ್‌ಜಿ
(3) ಏಕ್ತಾ ಕಪೂರ್
(4) ಡಾ॥ ಪ್ರತಾಪ್ ರೆಡ್ಡಿ

122. ಒಂದು ನಿರ್ದಿಷ್ಟ ಅವಧಿಗೆ ಭವಿಷ್ಯದ ಕಾರ್ಯಾಚರಣೆಗಳನ್ನು ಮುಂದಾಗಿ ನಿರ್ಧರಿಸುವುದನ್ನು ಹೀಗೆ ಕರೆಯುವವರು

(1) ಸಂಘಟಿಸುವುದು
(2) ನಿರ್ದೇಶನ
(3) ಸಂಯೋಜನೆ
(4) ಯೋಜನೆ

www.prepp.in

Prepp
Your Personal Exams Guide

**123.** ಪುನರ್ ರಫ್ತು ವ್ಯಾಪಾರಕ್ಕೆ ಉತ್ತಮ ಉದಾಹರಣೆ

(1) ಸಿಂಗಾಪುರ್ (2) ಯು.ಎಸ್.ಎ.

(3) ಯು.ಕೆ. (4) ಫ್ರಾನ್ಸ್

**124.** ಆಫ್ರಿಕಾ ಮತ್ತು ಯೂರೋಪ್‌ಗಳನ್ನು ಪ್ರತ್ಯೇಕಿಸುವ ಜಲಸಂಧಿಯೆಂದರೆ

(1) ಪರ್ಷಿಯನ್ ಜಲಸಂಧಿ (2) ಜಿಬ್ರಾಲ್ಟರ್ ಜಲಸಂಧಿ

(3) ಬೇರಿಂಗ್ ಜಲಸಂಧಿ (4) ಹಡ್ಸನ್ ಜಲಸಂಧಿ

**125.** ಉಷ್ಣ ಮತ್ತು ಶುಷ್ಕ ಬೇಸಿಗೆ ಮತ್ತು ತೇವಯುತ ಚಳಿಗಾಲಗಳು ಈ ವಾಯುಗುಣದ ಲಕ್ಷಣಗಳು

(1) ತೇವಯುತ ಸಮಭಾಜಕವೃತ್ತ ವಾಯುಗುಣ

(2) ಉಷ್ಣವಲಯದ ಮರುಭೂಮಿ ವಾಯುಗುಣ

(3) ಮೆಡಿಟರೇನಿಯನ್ ವಾಯುಗುಣ

(4) ಸಮಶೀತೋಷ್ಣವಲಯದ ಹುಲ್ಲುಗಾವಲು ಪ್ರದೇಶ

**126.** ವಿಶ್ವದ ನೈಸರ್ಗಿಕ ಅದ್ಭುತವಾದ 'ಗ್ರ್ಯಾಂಡ್ ಮಹಾಕಂದರ'ವನ್ನು ನಿರ್ಮಿಸಿರುವ ನದಿಯೆಂದರೆ

(1) ಮಿಸ್ಸಿಸ್ಸಿಪ್ಪಿ (2) ಕೊಲರಾಡೋ

(3) ಮಿಸ್ಸೋರಿ (4) ಸೆಂಟ್ ಲಾರೆನ್ಸ್

**127.** ದಕ್ಷಿಣ ಅಮೇರಿಕಾದ ಪಶ್ಚಿಮ ಅಂಚಿನುದ್ದಕ್ಕೂ ಹಬ್ಬಿರುವ ಪರ್ವತ ಶ್ರೇಣಿ ಎಂದರೆ

(1) ಅಪಲೇಷಿಯನ್ ಪರ್ವತ (2) ಆಂಡೀಸ್ ಪರ್ವತ

(3) ಆಲ್ಪ್ಸ್ ಪರ್ವತ (4) ಯೂರಾಲ್ಸ್ ಪರ್ವತ

**128.** ಭೂಮಿಯ ಒಟ್ಟು ಭೌಗೋಳಿಕ ಭೂಪ್ರದೇಶದಲ್ಲಿ ಭೂಭಾಗವು ಆವರಿಸಿರುವುದು

(1) 361 ದ. ಲ. ಚ. ಕಿ. ಮೀ. (2) 157 ದ. ಲ. ಚ. ಕಿ. ಮೀ.

(3) 149 ದ. ಲ. ಚ. ಕಿ. ಮೀ. (4) 147 ದ. ಲ. ಚ. ಕಿ. ಮೀ.

www.prepp.in

Prepp
Your Personal Exams Guide

129. ಹಿಮನದಿಯ ಸಂಚಯನ ಕಾರ್ಯದಿಂದ ನಿರ್ಮಾಣಗೊಳ್ಳುವ ಭೂ ಸ್ವರೂಪವೆಂದರೆ

(1) ಪ್ರವಾಹ ಮೈದಾನ
(2) ರೇವೆ ಮೈದಾನ
(3) ಅವರೋಹಿ ಶಂಖು
(4) ಲೋಯಸ್ ಮೈದಾನ

130. ಆಗುಂಬೆ ಘಟ್ಟವು ಇವೆರಡನ್ನು ಸಂಪರ್ಕಿಸುತ್ತದೆ

(1) ಮಂಗಳೂರು ಮತ್ತು ಚಿಕ್ಕಮಗಳೂರು
(2) ಶಿವಮೊಗ್ಗ ಮತ್ತು ಉಡುಪಿ
(3) ಹಾಸನ–ಸಕಲೇಶಪುರ ಮತ್ತು ಮಂಗಳೂರು
(4) ಶಿವಮೊಗ್ಗ ಮತ್ತು ಕುಂದಾಪುರ

131. ಕೃಷ್ಣಾನದಿಯ ಉಪನದಿಗಳ ಸರಿಯಾದ ಕ್ರಮಾಣಿಕೆ

(1) ಭೀಮ, ಘಟಪ್ರಭಾ, ಗಂಗಾವಳಿ, ಭಗವತಿ
(2) ಭೀಮ, ಕೊಯ್ನ, ಮಲಪ್ರಭಾ, ಛಾಯ
(3) ಕೊಯ್ನ, ತುಂಗಭದ್ರಾ, ವಾರಾಹಿ, ಶಿಂಷಾ
(4) ಭೀಮ, ತುಂಗಭದ್ರಾ, ಕೊಯ್ನ, ಘಟಪ್ರಭಾ

132. ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಸುವರ್ಣ ಚತುಷ್ಕೋನ ಹೆದ್ದಾರಿ ಯೋಜನೆ ಮತ್ತು ಕಾರಿಡಾರ್ ಯೋಜನೆಗಳಡಿಯಲ್ಲಿ ಸೇರಿರುವ ಹೆದ್ದಾರಿಗಳನ್ನು ಹೆಸರಿಸಿ.

(1) NH-4 ಮತ್ತು NH-48
(2) NH-4 ಮತ್ತು NH-7
(3) NH-7 ಮತ್ತು NH-13
(4) NH-4 ಮತ್ತು NH-17

133. ಭಾರತದ ಮುಖ್ಯ ನಾಡಿನ ಕರಾವಳಿ ತೀರದ ಒಟ್ಟು ಉದ್ದವೆಂದರೆ

(1) 6,100 ಕಿ.ಮೀ.
(2) 7,516 ಕಿ.ಮೀ.
(3) 15,200 ಕಿ.ಮೀ.
(4) 3,214 ಕಿ.ಮೀ.

www.prepp.in

134. "ಅಪಾರ ಪ್ರಮಾಣದ ಬಂಡವಾಳ ಮತ್ತು ಕಾರ್ಮಿಕರ ಶ್ರಮವನ್ನು ಪ್ರತಿ ಘಟಕ ಭೂಭಾಗದ ಮೇಲೆ ಅನ್ವಯಿಸಲ್ಪಡುವಿಕೆ" ಈ ವಿಧಾನದ ಕೃಷಿ ಪ್ರಕಾರವೇ

(1) ವಾಣಿಜ್ಯ ಬೇಸಾಯ
(2) ಸಾಂದ್ರ ಬೇಸಾಯ
(3) ಮಿಶ್ರ ಬೇಸಾಯ
(4) ನೀರಾವರಿ ಬೇಸಾಯ

135. ರಾಜೀವ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನೆಲೆಗೊಂಡಿರುವುದು ಇಲ್ಲಿ

(1) ಹೈದರಾಬಾದ್
(2) ಅಮೃತಸರ
(3) ದೆಹಲಿ
(4) ಭುವನೇಶ್ವರ

136. ಐದು 'E' ಮಾದರಿಯ ಸರಿಯಾದ ಘಟ್ಟಗಳು

(1) Engage, Explain, Examples, Enact, Evaluation
(2) Engage, Explain, Examples, Elaborate, Evaluation
(3) Engage, Elaborate, Explore, Enact, Evaluation
(4) Engage, Explore, Explain, Elaborate, Evaluation

137. ಹಕ್ಕುಗಳು ಮತ್ತು ಕರ್ತವ್ಯ ಪ್ರಜ್ಞೆಯು ಇದರ ಭಾಗವಾಗಿದೆ

(1) ಪೌರ ಪ್ರಜ್ಞೆ
(2) ಸ್ಥಳ ಪ್ರಜ್ಞೆ
(3) ಸಮಯ ಪ್ರಜ್ಞೆ
(4) ವ್ಯವಹಾರ ಪ್ರಜ್ಞೆ

138. ಐತಿಹಾಸಿಕ ಚಳುವಳಿಗಳ ಬೆಳವಣಿಗೆ, ರಾಜವಂಶಗಳ ಮತ್ತು ಸಂಸ್ಥೆಗಳ ಏಳಿಗೆ ಮತ್ತು ಪತನವನ್ನು ತೋರಿಸಿ, ವಿವರಿಸಲು ಬಳಸುವ ಸೂಕ್ತ ಸಾಧನ

(1) ಕಾಲರೇಖೆ *
(2) ಕಾಲಸುರುಳಿ
(3) ಕಾಲನಕ್ಷೆ
(4) ತುಲನಾತ್ಮಕ ಕಾಲರೇಖೆ

139. ನಿರಂತರ ಮತ್ತು ಸಮಗ್ರ ಮೌಲ್ಯಮಾಪನ ಪ್ರಕ್ರಿಯೆಯನ್ನು ಜಾರಿಗೊಳಿಸಿದ ಕಾಯ್ದೆ

(1) ಭಾರತದ ಶಿಕ್ಷಣ ಹಕ್ಕು ಕಾಯ್ದೆ – 2005
(2) ಭಾರತದ ಶಿಕ್ಷಣ ಹಕ್ಕು ಕಾಯ್ದೆ – 2009
(3) ಭಾರತದ ಶಿಕ್ಷಣ ಹಕ್ಕು ಕಾಯ್ದೆ – 2006
(4) ಭಾರತದ ಶಿಕ್ಷಣ ಹಕ್ಕು ಕಾಯ್ದೆ – 2004

www.prepp.in

140. ಕೋಲ್ಬ್‌ರವರ 'ಅನುಭವಾತ್ಮಕ ಕಲಿಕೆ'ಯ ವೃತ್ತವು ನಾಲ್ಕು ಅಂಶಗಳನ್ನು ಒಳಗೊಂಡಿದೆ, ಅವುಗಳೆಂದರೆ

(1) ವಾಸ್ತವ ಅನುಭವಗಳು, ವೀಕ್ಷಣೆ ಮತ್ತು ಪ್ರತಿಫಲನ, ಅಮೂರ್ತ ಕಲ್ಪನೆಗಳ ರಚನೆ, ಹೊಸ ಸಂದರ್ಭದಲ್ಲಿ ಪರೀಕ್ಷಿಸುವುದು

(2) ವಾಸ್ತವ ಅನುಭವಗಳು, ವೀಕ್ಷಣೆ ಮತ್ತು ಪ್ರತಿಫಲನ, ಮೂರ್ತ ಕಲ್ಪನೆಗಳ ರಚನೆ, ಹೊಸ ಸಂದರ್ಭದಲ್ಲಿ ಪರೀಕ್ಷಿಸುವುದು

(3) ವಾಸ್ತವ ಅನುಭವಗಳು, ವೀಕ್ಷಣೆ ಮತ್ತು ಕ್ರಿಯೆ, ಅಮೂರ್ತ ಕಲ್ಪನೆಗಳ ರಚನೆ, ಹೊಸ ಸಂದರ್ಭದಲ್ಲಿ ಪರೀಕ್ಷಿಸುವುದು

(4) ಅಮೂರ್ತ ಅನುಭವಗಳು, ವೀಕ್ಷಣೆ ಮತ್ತು ಕ್ರಿಯೆ, ಮೂರ್ತ ಕಲ್ಪನೆಗಳ ರಚನೆ, ಹೊಸ ಸಂದರ್ಭದಲ್ಲಿ ಪರೀಕ್ಷಿಸುವುದು

141. "ಪಾಠ ಯೋಜನೆಯು ಬೋಧನೆಯ ಕ್ರಿಯಾತ್ಮಕ ಪೂರ್ವ ತಯಾರಿಯಾಗಿದೆ" ಎಂದು ವ್ಯಾಖ್ಯಾನಿಸಿದವರು

(1) ಲೆಸ್ಟರ್ ಬಿ. ಸ್ಯಾಂಡ್ಸ್

(2) ಬಾಸಿಂಗ್ ಎನ್. ಎಲ್.

(3) ಸಿ. ವಿ. ಗುಡ್

(4) ಬಿ. ಸಿ. ಸ್ಟೆರ್ಲಿಂಗ್

142. ಕೆಳಗಿನವುಗಳಲ್ಲಿ ವಿದ್ಯಾರ್ಥಿ ಕೇಂದ್ರಿತ ಸೂಚನಾ ವಿಧಾನವಲ್ಲದ್ದು

(1) ಪ್ರಾತ್ಯಕ್ಷಿಕೆ

(2) ಕ್ರಮಾನುಗತ ಬೋಧನೆ

(3) 5 'E' ಮಾದರಿ

(4) ಗಣಕಯಂತ್ರ ಆಧಾರಿತ ಬೋಧನೆ

143. "ಪಠ್ಯ ಪುಸ್ತಕವು ಬೋಧನೆಗೆ ಅರ್ಧ ಸಾಮಾಗ್ರಿಯಿದ್ದಂತೆ" ಎಂದು ಹೇಳಿದವರು

(1) ಸಿ. ವಿ. ಗುಡ್

(2) ರೇಟಿಂಗ್

(3) ಬಾಸಿಂಗ್ ಎನ್. ಎಲ್.

(4) ಹಂಟರ್

144. "ಕೃಷ್ಣ ದೇವರಾಯನ ಸಾಮ್ರಾಜ್ಯ ವಿಸ್ತರಣೆಯನ್ನು ವಿವರಿಸಿ." ಈ ಪ್ರಶ್ನೆಯಲ್ಲಿರುವ ನಿರ್ದಿಷ್ಟತೆಯು ಈ ಕೆಳಗಿನ ಬೋಧನಾ ಉದ್ದೇಶಕ್ಕೆ ಸಂಬಂಧಿಸಿದೆ

(1) ಜ್ಞಾನ

(2) ತಿಳುವಳಿಕೆ

(3) ಅನ್ವಯ

(4) ಕೌಶಲ್ಯ

www.prepp.in

Prepp
Your Personal Exams Guide

145. 'ಆಳ ಶೋಧನಾ ಪ್ರಶ್ನಾ ಕೌಶಲ್ಯ'ವು ಈ ಕೆಳಗಿನ ಒಂದು ಘಟಕಾಂಶವನ್ನು ಹೊಂದಿರುವುದಿಲ್ಲ

(1) ಪ್ರೇರೇಪಣಾ ತಂತ್ರ

(2) ವಿಮರ್ಶಾತ್ಮಕ ಆಲೋಚನಾ ಶಕ್ತಿ ಹೆಚ್ಚಿಸುವ ತಂತ್ರ

(3) ಪುನರ್ ಕೇಂದ್ರೀಕರಿಸುವಿಕೆ ತಂತ್ರ

(4) ಅರ್ಥಪೂರ್ಣ ಪ್ರಶ್ನೆಗಳ ತಂತ್ರ

146. 'ಶಾಲೆಯ ಬಳಿಗೆ ಸಮುದಾಯವನ್ನು ತರುವುದು' ಈ ವಿಧದ ಸಮುದಾಯ ಸಂಪನ್ಮೂಲಗಳ ಬಳಕೆಗೆ ಸೂಕ್ತ ಉದಾಹರಣೆ ಎಂದರೆ

(1) ಕ್ಷೇತ್ರ ಅಧ್ಯಯನ

(2) ಸಮುದಾಯ ಸಮೀಕ್ಷೆ

(3) ಸಮುದಾಯ ಸೇವಾ ಶಿಬಿರಗಳು

(4) ಶ್ರೇಷ್ಠ ವ್ಯಕ್ತಿಗಳನ್ನು ಶಾಲೆಗೆ ಆಹ್ವಾನಿಸುವುದು

147. ಶಾಲೆಗಳಲ್ಲಿ ಸಹಪಠ್ಯ ಚಟುವಟಿಕೆಗಳ ಒಂದು ಬಹು ಮುಖ್ಯ ಉದ್ದೇಶವೆಂದರೆ

(1) ಸಮಯ ನಿರ್ವಹಣೆಯ ಪಾಲನೆ

(2) ಮನರಂಜನೆ

(3) ಮೌಲ್ಯಮಾಪನ

(4) ವೀಕ್ಷಣೆ

148. 'ಕ್ರಿಯಾ ಸಂಶೋಧನೆ' ಎಂಬ ಪದವನ್ನು ಮೊಟ್ಟಮೊದಲ ಬಾರಿಗೆ ಬಳಸಿದವರು

(1) ಜೆ. ಡಬ್ಲ್ಯೂ. ಬೆಸ್ಟ್

(2) ಕರ್ಟ್ ಲೆವಿನ್

(3) ಸ್ಟೀಫೆನ್ ಕೊರಿ

(4) ಮೌಲಿ

149. "ವಿಶ್ಲೇಷಣಾತ್ಮಕ ಮತ್ತು ಪರಿಕಲ್ಪನಾ ಕೌಶಲ್ಯಗಳನ್ನು ಅಭಿವೃದ್ಧಿ ಪಡಿಸುವುದು" ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು – 2005 (NCF-2005)ರ ಉದ್ದೇಶವಾಗಿದ್ದು, ಇದು ಈ ಕೆಳಗಿನ ಹಂತಕ್ಕೆ ಸಂಬಂಧಿಸಿದೆ

(1) ಪ್ರಾಥಮಿಕ ಹಂತ

(2) ಉನ್ನತ ಪ್ರಾಥಮಿಕ ಹಂತ

(3) ಮಾಧ್ಯಮಿಕ ಹಂತ

(4) ಉನ್ನತ ಮಾಧ್ಯಮಿಕ ಹಂತ

150. ತರಗತಿಯಲ್ಲಿ ಶಿಕ್ಷಕನ ಎರಡನೇ ನಾಲಿಗೆ ಎಂದರೆ

(1) ಪಠ್ಯಪುಸ್ತಕ

(2) ಕಪ್ಪುಹಲಗೆ

(3) ಭೂಪಟಗಳು

(4) ಚಿತ್ರಪಟಗಳು